بِسْمِ اللّٰہِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 12

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

24 ಮಾರ್ಚ್ 2022, 24 ಅಮಾನ್ 1401 ತಬ್‌ಲೀಗ್ ಹಿಜರಿ ಶಮ್‌ಸಿ, 20 ಶಅ್‌ಬಾನ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَلَقَدْ كُذِّبَتْ رُسُلٌ مِّنْ قَبْلِكَ فَصَبَرُوْا عَلٰی مَا كُذِّبُوْا وَاُوْذُوْا حَتّٰۤی اَتٰىهُمْ نَصْرُنَا ۚ وَلَا مُبَدِّلَ لِكَلِمٰتِ اللّٰهِ ۚ وَلَقَدْ جَآءَكَ مِنْ نَّبَاِى الْمُرْسَلِيْنَ (سورة الانعام:35)

(ಅಲ್‌ಅನ್‌ಆಂ : 35)

ಅಂದರೆ: ದಿಟವಾಗಿಯೂ ನಿನಗೆ ಮುಂಚೆಯೂ ಪ್ರವಾದಿಗಳು ತಿರಸ್ಕೃತರಾಗಿದ್ದಾರೆ. ತಿರಸ್ಕಾರಕ್ಕೂ ಪೀಡನೆಗಳಿಗೂ ಗುರಿಯಾದರೂ ನಮ್ಮ ಸಹಾಯ ಅವರಿಗೆ ಬಂದೊದಗುವ ತನಕ ಅವರು ಸೈರಿಸಿಕೊಂಡರು. ಅಲ್ಲಾಹನ ವಚನಗಳನ್ನು ಬದಲಾಯಿಸುವವರು ಯಾರೂ ಇಲ್ಲ. ನಿಜವಾಗಿಯೂ (ಪೂರ್ವಕಾಲದ) ಕೆಲವು ಪ್ರವಾದಿಗಳ ವೃತ್ತಾಂತಗಳು ನಿನಗೆ ತಲಪಿರುತ್ತವೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮದೀನದ ಪ್ರಾಮುಖ್ಯತೆ

(1871) ಹಝ್‌ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ನನಗೆ ಎಂತಹ ಪಟ್ಟಣದಲ್ಲಿ ಹೋಗುವ ಆಜ್ಞೆ ಆಗಿದೆ ಎಂದರೆ ಅದು ಎಲ್ಲಾ ಪಟ್ಟಣಗಳನ್ನು ನುಂಗಿಹಾಕುವುದು. ಅದನ್ನು ಯಸ್ರಬ್ ಎನ್ನುತ್ತಾರೆ. ಆ ಪಟ್ಟಣ ಮದೀನ ಆಗಿದೆ. ಅದು ಪಾಪಿ ಜನರನ್ನು ತ್ಯಾಜ್ಯ ವಸ್ತುಗಳಂತೆ ತೆಗೆದು ಹಾಕುವುದು, ಅಗ್ನಿಯಲ್ಲಿ ತಪಿಸುತ್ತಿರುವ ಕಬ್ಬಿಣದಿಂದ ಕಲ್ಮಶಗಳನ್ನು ಸುಟ್ಟು ಹಾಕುವಂತೆ.

ಟಿಪ್ಪಣಿ: ಹಝ್‌ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲ ಶಾಹ್ ಸಾಹಿಬ್ ಅದರ ವ್ಯಾಖ್ಯಾನದಲ್ಲಿ ಬರೆಯುತ್ತಾರೆ. ಮದೀನದ ಪಾವಿತ್ರ್ಯತೆ ದುಷ್ಕರ್ಮಿ ಜನರು ದೂರವಾದ ನಂತರವೇ ಉಳಿಯಲು ಸಾಧ್ಯವಿತ್ತು. ಈ ಘಟನೆಗಳು ಹಝ್‌ರತ್ ರಸೂಲುಲ್ಲಾಹ್(ಸ) ರವರ ಈ ಹೇಳಿಕೆಯನ್ನು ಅಕ್ಷರಶಃ ಸತ್ಯವೆಂದು ಸಾಬೀತುಗೊಳಿಸಿದೆ. ಯಹೂದಿ ಸಮುದಾಯದವರು ಒಡಂಬಡಿಕೆಯನ್ನು ಮುರಿದು ಹಾಕಿದರು ಮತ್ತು ಹೊರಗಿನ ಶತ್ರುಗಳೊಂದಿಗೆ ಸೇರಿ ಒಳಸಂಚು ಮಾಡಿಕೊಂಡು ಮದೀನ ಮೇಲೆ ಹಲ್ಲೆ ನಡೆಸಿದರು. ಅಂತಿಮವಾಗಿ ತನ್ನ ವಿದ್ರೋಹದಿಂದಾಗಿ ಒಬ್ಬರ ನಂತರ ಇನ್ನೊಬ್ಬರು ಮದೀನದಿಂದ ಹೊರಹಾಕಲ್ಪಟ್ಟರು. ಹಝ್‌ರತ್ ರಸೂಲುಲ್ಲಾಹ್(ಸ) ರವರ ಹೇಳಿಕೆಯ ಇನ್ನೊಂದು ಭಾಗ ಪೂರ್ತಿಯಾದದ್ದು ಯಾವಾಗ ಎಂದರೆ ಮದೀನವನ್ನು ಇಸ್ಲಾಮಿನ ಮೊದಲ ಕೇಂದ್ರವಾಗಿ ಮಾರ್ಪಟ್ಟಿತು. ಖಲಿಫ ರಾಶಿದಾದ ಪವಿತ್ರ ಕಾಲಾವಧಿಗಳಲ್ಲಿ ಮಹೋನ್ನತವಾದ ವಿಜಯಗಳು ದೊರೆತವು. ಇತರ ಪಟ್ಟಣಗಳನ್ನು ನುಂಗುವುದರ ಅರ್ಥ ಇತರ ಪಟ್ಟಣಗಳ ಮೇಲೆ ವಿಜಯ ಸಾಧಿಸುವುದು ಎಂದಾಗಿದೆ.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬ್ ಫಝಾಎಲುಲ್ ಮದೀನ, ಮುದ್ರಣ 2008)**

**ಯಾರು ಅಲ್ಲಾಹನ ಘನತೆ ಗೌರವ ಮತ್ತು ಪಾವಿತ್ರ್ಯತೆಗಾಗಿ ಹೆಮ್ಮೆಪಡುವುದಿಲ್ಲ. ಅವರ ನಮಾಝುಗಳು (ಆರಾಧನೆ) ಮಿತ್ಯವಾಗಿವೆ ಅವರ ಸಾಷ್ಟಾಂಗ ಪ್ರಣಾಮಗಳು ವ್ಯರ್ಥವಾಗಿವೆ ಹೆಮ್ಮೆ ಗೌರವವಿಲ್ಲದ ಸಾಷ್ಟಾಂಗ ಪ್ರಣಾಮಗಳು ಕೇವಲ ಛೂಮಂತ್ರಗಳಾಗಿವೆ. ಆ ಮೂಲಕ ಸ್ವರ್ಗವನ್ನು ಪಡೆಯ ಬಯಸುತ್ತಾರೆ. ಅಲ್ಲಾಹನು ಯಾವ ರೀತಿ ಮೃಗಬಲಿಯ ಮಾಂಸವು ತನಗೆ ತಲುಪುವುದಿಲ್ಲ ಎಂದು ಹೇಳಿರುವನೋ ಅದೇ ರೀತಿ ಹೆಮ್ಮೆ ಗೌರವದ ಉತ್ಸಾಹ ಭಾವನೆಗಳು ಉಂಟಾಗುವವರೆಗೆ ನಿಮ್ಮ ನಮಿಸುವಿಕೆ ಮತ್ತು ಸಾಷ್ಟಾಂಗ ಪ್ರಣಾಮಗಳು ಸಹ ಅವನಿಗೆ ತಲುಪುವುದಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಅಲ್ಲಾಹನ ಗೌರವ ಹಾಗೂ ಪ್ರತಾಪ ಪ್ರಕಟನೆಯ ಅಭಿಲಾಷಿ

ಯಾರಿಗೆ ಅಲ್ಲಾಹನ ಗೌರವ ಮತ್ತು ಪ್ರತಾಪದ ಪ್ರಕಟಣೆಯ ಅಭಿಲಾಷೆಯು ಉಂಟಾಗುವುದೋ ಅಲ್ಲಾಹನ ಸನ್ನಿಧಿಯಲ್ಲಿ ಅವರೇ ಅವನ ಸ್ನೇಹಿತರು ಮತ್ತು ಅನುಗ್ರಹಿತರು ಆಗಿರುತ್ತಾರೆ. ಅಲ್ಲಾಹನು ತನ್ನ ಪ್ರತಾಪ ವ್ಯಕ್ತಪಡಿಸ ಬಯಸುತ್ತಾನೆ. ನಮಾಝಿನಲ್ಲಿ **ಸುಬ್ಹಾನ ರಬ್ಬಿಯಲ್ ಅಝೀಮ್** ಮತ್ತು **ಸುಬ್ಹಾನ ರಬ್ಬಿಯಲ್ ಆಲಾ** ಹೇಳುವುದು ಅವನ ಪ್ರತಾಪ ಕಾಣುವ ಅಭಿಲಾಷೆಯಾಗಿದೆ. ಅಲ್ಲಾಹನ ಘನತೆ ಗೌರವ ಭಾವನೆ ಯಾವ ರೀತಿ ಇರಬೇಕೆಂದರೆ ಅದು ಉದಾಹರಣಾತೀತವಾಗಿರಬೇಕು. ನಮಾಝಿನಲ್ಲಿ ಅವನ ಪಾವಿತ್ರ್ಯತೆ ಸ್ಮರಣೆ ಸ್ತುತಿಕೀರ್ತನೆಯಿಂದ ಅದೇ ಸ್ಥಿತಿ ಉಂಟಾಗುತ್ತದೆ. ಅಲ್ಲಾಹನು ಉದ್ದೇಶಿಸುವುದೇನೆಂದರೆ ಸಹಜ ಕ್ರಿಯೆಯಿಂದ ತನ್ನ ಕಾರ್ಯಗಳನ್ನು ಯಾವ ತೋರಿಕೆ ಭಾವನೆಯಿಲ್ಲದೆ ಭಕ್ತಿ ಮಾಡದಿದ್ದರೆ ಯಾರೂ ಸಹ ನನ್ನಿಂದ ವಿಜಯ ಪಡೆಯಲಾರಿರಿ. ಅವನ ಇಚ್ಛಾನುಸಾರ ಭಕ್ತಿ ಮಾಡುವುದೇ ಆರಾಧನೆಯಾಗಿರುತ್ತದೆ. ಅವರೇ ನಿಜವಾದ ಭಕ್ತರು ಎನಿಸಿಕೊಳ್ಳುತ್ತಾರೆ ಮತ್ತು ಅವನಿಂದ ಅನುಗ್ರಹಿತರಾಗುತ್ತಾರೆ. ಯಾರೂ ಅಲ್ಲಾಹನ ಘನತೆ, ಗೌರವ ಮತ್ತು ಪಾವಿತ್ರ್ಯತೆಗಾಗಿ ಹೆಮ್ಮೆಪಡುವುದಿಲ್ಲವೋ ಅವರ ನಮಾಝುಗಳು (ಆರಾಧನೆ) ಮಿಥ್ಯವಾಗಿವೆ. ಅವರ ಸಾಷ್ಟಾಂಗ ಪ್ರಣಾಮಗಳು ವ್ಯರ್ಥವಾಗಿವೆ. ಹೆಮ್ಮೆ ಗೌರವವಿಲ್ಲ, ಸಾಷ್ಟಾಂಗ ಪ್ರಣಾಮಗಳು ಕೇವಲ ಛೂಮಂತ್ರಗಳಾಗಿವೆ. ಆ ಮೂಲಕ ಸ್ವರ್ಗವನ್ನು ಪಡೆಯಬಯಸುತ್ತಾರೆ. ಅಲ್ಲಾಹನು ಯಾವ ರೀತಿ ಮೃಗಬಲಿಯ ಮಾಂಸವು ತನಗೆ ತಲುಪುವುದಿಲ್ಲ ಎಂದು ಹೇಳಿರುವನೋ ಅದೇ ರೀತಿ ನಿಮ್ಮ ನಮಿಸುವಿಕೆ ಮತ್ತು ಸಾಷ್ಟಾಂಗ ಪ್ರಣಾಮಗಳು ಸಹ ತಲುಪುವುದಿಲ್ಲ, ಹೆಮ್ಮೆ ಗೌರವ ಭಾವನೆಗಳು ಉಂಟಾಗುವವರೆಗೆ ಅಲ್ಲಾಹನು ನಿಮ್ಮ ಹೃದಯಾಳದ ಭಾವನೆಗಳನ್ನು ಬಯಸುತ್ತಾನೆ. ಅಲ್ಲಾಹನು ತನ್ನನ್ನು ಗೌರವಿಸುವ ಹಾಗೂ ತನ್ನ ಬಗ್ಗೆ ಪ್ರೀತಿಯುಳ್ಳವರನ್ನು ಇಷ್ಟಪಡುವನು. ಹೀಗೆ ಮಾಡುವವರು ಒಂದು ಸೂಕ್ಷ್ಮ ಹಾದಿ ಹಿಡಿದಂತೆ ಅದನ್ನು ಬೇರೊಬ್ಬರು ಸಾಧಿಸಲಾಗುವುದಿಲ್ಲ. ಆ ಭಾವನೆಗಳು ಬಾರದಿದ್ದರೆ ಅಂತಹ ಮನುಷ್ಯನು ಪ್ರಗತಿ ಸಾಧಿಸಲು ಸಹ ಶಕ್ತನಾಗುವುದಿಲ್ಲ. ಅಂದರೆ ಅಲ್ಲಾಹನೆ ಪ್ರಮಾಣ ಮಾಡಿರುವನು, ಎಲ್ಲಿಯವರೆಗೆ ಹೆಮ್ಮೆ ಗೌರವ ಭಾವನೆ ಮತ್ತು ಪ್ರೀತಿಯನ್ನು ಯಾಚಿಸುವುದಿಲ್ಲವೋ, ದೇವನೂ ಸಹ ಅವರನ್ನು ಪ್ರೀತಿಸುವುದಿಲ್ಲ.

ಪ್ರತಿಯೊಬ್ಬ ಮನುಷ್ಯನು ಒಂದು ಬಯಕೆ ಹೊಂದಿರುತ್ತಾನೆ, ಆದರೆ ಎಲ್ಲಿಯವರೆಗೆ ತಮ್ಮ ಎಲ್ಲ ಬಯಕೆಗಳನ್ನು ಅಲ್ಲಾಹನ ಘನತೆ ಗೌರವಕ್ಕಾಗಿ ತ್ಯಾಗ ಮಾಡಿ ಅದಕ್ಕೆ ಆಧ್ಯತೆ ನೀಡುವುದಿಲ್ಲವೋ ಅವನು ಸತ್ಯವಿಶ್ವಾಸಿಯಾಗಲು ಸಾಧ್ಯವಿಲ್ಲ. ವಲಿ ಎಂದರೆ ನಿಕಟ ಬಂಧು ಮತ್ತು ಸ್ನೇಹಿತನಿಗೆ ಹೇಳುತ್ತಾರೆ. ಸ್ನೇಹಿತ ಬಯಸಿದ್ದನ್ನೇ ನಾನು ಬಯಸುತ್ತೇವೆ. ಆಗಲೇ ಅವನು ಸ್ನೇಹಿತ ಎಂದು ಕರೆಯಲ್ಪಡುವುದು. ಅಲ್ಲಾಹನು ಹೇಳಿದನು. "ವಮಾ ಖಲಖ್ತುಲ್ ಜಿನ್ನ ವಲ್ ಇನ್ಸ ಇಲ್ಲ ಲಿಯಾ ಬುದೂನ್." (ಅಝಾರಿಯಾತ್–57) ಅಂದರೆ ಅಲ್ಲಾಹನ ಬಗ್ಗೆ ಉತ್ಸಾಹ ಹೊಂದಿರಬೇಕು. ಆಗ ಅವನು ತಮ್ಮಲ್ಲೂ ಸಂಬಂಧಗಳಲ್ಲಿ ಎದ್ದು ಕಾಣುವನು. ಅಲ್ಲಾಹನ ಸಾನಿಧ್ಯ ಪಡೆದವರಲ್ಲಿ ಸೇರುವನು. ಮೃತರ ಹಾಗೆ ಆಗಬಾರದು. ಮೃತನ ಬಾಯಲ್ಲಿ ಯಾವುದಾದರೊಂದು ವಸ್ತು ಹಾಕಿದರೆ ಅದು ಮರಳಿ ಬಂದುಬಿಡುತ್ತದೆ. ಅದೇ ರೀತಿ ಕಠಿಣ ಹೃದಯ ಹೊಂದಿದವರಿಗೆ ಯಾವ ಒಳ್ಳೆತನವು ಪ್ರಭಾವ ಬೀರುವುದಿಲ್ಲ. ನೆನಪಿಡಿರಿ. ಯಾವ ಆರಾಧನೆಯು, ದಾನವೂ ಅಲ್ಲಾಹನ ಪ್ರತಿ ನಿಷ್ಠೆಯಿಲ್ಲದಿದ್ದರೆ ಸ್ವೀಕಾರವಾಗುವುದಿಲ್ಲ. ಯಾವ ಸ್ವಾರ್ಥವು ಸಹ ಇರಬಾರದು, ಸ್ವಹಿತ ಹೊಂದಬಾರದು, ನಾನು ಏಕೆ ಇಷ್ಟೊಂದು ನಿಷ್ಠೆ ಉತ್ಸಾಹ ಹೊಂದಿದ್ದೇನೆ ಸ್ವಯಂ ಅಜ್ಞಾತರಾಗಿರಬೇಕು. ಅಂತಹ ಬಹಳಷ್ಟು ಜನರ ಜನನವಾಗಬೇಕಾಗಿದೆ. ಆದರೆ ಅದು ಅಲ್ಲಾಹನು ಬಯಸದೆ ಏನೂ ಆಗಲು ಸಾಧ್ಯವಿಲ್ಲ.

(ಮಲ್ಫೂಝಾತ್ ಸಂಪುಟ–1, ಪುಟ 357–358 ಮುದ್ರಣ 2018 ಖಾದಿಯಾನ್)

# ಖುತ್‌ಬ ಜುಮುಅ

**ಅಬೂಬಕರ್‌ರ ಉದಾಹರಣೆ ಪ್ರವಾದಿಗಳಲ್ಲಿ ಹಝ್ರ‍ತ್ ಇಬ್ರಾಹೀಮ್(ರ)ರಂತಾಗಿದೆ. (ಅಲ್ ಹದೀಸ್)**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ‍ತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಯುದ್ಧ ಬನೂ ಖುರೈಝ್ಹ, ಹುದೈಬಿಯ ಸಂಧಿ, ನಜದಿನ ಕಡೆಗೆ ಹಝ್ರ‍ತ್ ಅಬೂಬಕರ್(ರ)ರ ದಂಡಯಾತ್ರೆ, ಬನೂ ಫುಝಾರನ ಕಡೆಗೆ ಹಝ್ರ‍ತ್ ಅಬೂಬಕರ್(ರ)ರ ದಂಡಯಾತ್ರೆ ಮತ್ತು ಮಕ್ಕಾ ವಿಜಯದ ಕುರಿತು ವಿವರಾತ್ಮಕ ಪ್ರಸ್ತಾವನೆ**

**ನೋಡು ಉಮರ್, ಜಾಗರೂಕತೆಯಿಂದ ಇರು. ಹಝ್ರ‍ತ್ ಪೈಗಂಬರರ(ಸ) ಪೀಠದಲ್ಲಿ ನೀನು ಇರಿಸಿರುವ ಕೈಯನ್ನು ಸಡಿಲಗೊಳಿಸಬೇಡ. ಏಕೆಂದರೆ, ನಾವು ಯಾರ ಕೈಯಲ್ಲಿ ಕೈಯಿಟ್ಟಿದ್ದೇವೆಯೋ ಅವರು ಸತ್ಯವಂತರು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‍ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04-02-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ۔ بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇತ್ತೀಚಿಗೆ ಹಝ್ರ‍ತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿದೆ. ಕೆಲವು ಯುದ್ಧಗಳ ಬಗ್ಗೆಯೂ ಪ್ರಸ್ತಾಪಿಸಲಾಗಿತ್ತು. ಬನೂ ಖುರೈಝ್ಹ ಯುದ್ಧ ಎಂಬ ಹೆಸರಿನಲ್ಲಿ ಒಂದು ಯುದ್ಧ ನಡೆದಿತ್ತು. ಬನೂ ಖುರೈಝ್ಹ ಯುದ್ಧದಲ್ಲಿ ಭಾಗವಹಿಸಿದ ವ್ಯಕ್ತಿಗಳ ಹೆಸರುಗಳನ್ನು ವಾಖದಿ ನಮೂದಿಸಿರುವರು. ಅವರ ಪ್ರಕಾರ ಬನೂ ತೈಮ್ ಗೋತ್ರದಿಂದ ಹಝ್ರ‍ತ್ ಅಬೂಬಕರ್(ರ) ಮತ್ತು ಹಝ್ರ‍ತ್ ತಲ್‌ಹ ಬಿನ್ ಉಬೈದುಲ್ಲಾಹ್ ಕೂಡ ಬನೂ ಖುರೈಝ್ಹ ಯುದ್ಧದಲ್ಲಿ ಭಾಗಿಯಾಗಿದ್ದರು. (ಕಿತಾಬ್ ಅಲ್‌ಮಗಾಝಿ ಲಿಲ್ ವಾಖದಿ, ಸಂಪುಟ-2, ಪುಟ-4, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2013)

ಅಬ್ದುರ್ರಹ್ಮಾನ್ ಬಿನ್ ಗ಼ನಮ್ ವರದಿ ಮಾಡುತ್ತಾರೆ: ಹಝ್ರ‍ತ್ ಪೈಗಂಬರ್(ಸ) ಬನೂ ಖುರೈಝ್ಹದ ಕಡೆಗೆ ರವಾನೆಯಾದಾಗ ಹಝ್ರ‍ತ್ ಅಬೂಬಕರ್(ರ) ಮತ್ತು ಹಝ್ರ‍ತ್ ಉಮರ್(ರ) ಹಝ್ರ‍ತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಜನರು ನಿಮ್ಮನ್ನು ಲೌಕಿಕ ಸೌಂದರ್ಯವುಳ್ಳ ಉಡಿಗೆಯಲ್ಲಿ ನೋಡಿದರೆ, ಅವರಿಗೆ ಇಸ್ಲಾಂ ಸ್ವೀಕಾರ ಮಾಡುವ ಬಯಕೆ ಹೆಚ್ಚಾಗುವುದು. ಆದ್ದರಿಂದ ಹಝ್ರ‍ತ್ ಸಅದ್ ಬಿನ್ ಉಬಾದ ನಿಮಗೆ ನೀಡಿದ ಬಟ್ಟೆಯನ್ನು ಧರಿಸಿರಿ. ಬಹುದೇವಾರಾಧಕರು ನಿಮ್ಮನ್ನು ಸುಂದರವಾದ ವಸ್ತ್ರದಲ್ಲಿ ನೋಡುವಂತಾಗಲು ನೀವು ಅದನ್ನು ಉಟ್ಟುಕೊಳ್ಳಿರಿ. ಹಝ್ರ‍ತ್ ಪೈಗಂಬರ್(ಸ) ಹೇಳಿದರು: ನಾನು ಹಾಗೆ ಮಾಡುವೆನು. ಅಲ್ಲಾಹನಾಣೆ, ನೀವಿಬ್ಬರೂ ನನ್ನ ಬಗ್ಗೆ ಒಂದು ವಿಷಯದಲ್ಲಿ ಒಮ್ಮತಾಭಿಪ್ರಾಯವನ್ನು ಹೊಂದಿದರೆ, ನಾನು ನಿಮ್ಮ ಸಲಹೆಗೆ ವಿರುದ್ಧವಾಗಿ ಹೇಳುವುದಿಲ್ಲ. ನನಗಾಗಿ ನಿಮ್ಮಿಬ್ಬರ ಉದಾಹರಣೆ ದೇವದೂತರಲ್ಲಿ ಜಿಬ್ರೀಲ್ ಮತ್ತು ಮೀಕಾಯಿಲ್‌ನಂತಿದೆ ಎಂದು ಅಲ್ಲಾಹನು ಹೇಳಿರುವನು. ಉಮರ್ ಇಬ್ನು ಖತ್ತಾಬ್‌ರ ಉದಾಹರಣೆ ದೇವದೂತರಲ್ಲಿ ಜಿಬ್ರೀಲ್‌ನಂತಾಗಿದೆ. ಅಲ್ಲಾಹನು ಪ್ರತಿಯೊಂದು ಸಮುದಾಯವನ್ನು ಜಿಬ್ರೀಲ್‌ನ ಮೂಲಕವೇ ನಾಶಮಾಡಿರುವನು. ಉಮರ್‌ರ ಉದಾಹರಣೆ ಪ್ರವಾದಿಗಳಲ್ಲಿ ಹಝ್ರ‍ತ್ ನೂಹ್(ಅ)ರಂತಾಗಿದೆ. ಹಝ್ರ‍ತ್ ನೂಹ್(ಅ) ಹೀಗೆ ಹೇಳಿದ್ದರು: **ರಬ್ಬೀ ಲಾ ತಧ಼ರ್ ಅಲಲ್‌ಅರ್‌ಝ್ಹಿ ಮಿನಲ್ ಕಾಫಿರೀನ್**. ಎಂದರೆ ಹೇ ನನ್ನ ಪ್ರಭೂ, ಸತ್ಯನಿಷೇಧಿಗಳಲ್ಲಿ ಯಾರನ್ನೂ ಭೂಮಿಯಲ್ಲಿ ನೆಲೆನಿಲ್ಲಿಸಬೇಡ. ಅಬೂಬಕರ್ ಬಿನ್ ಅಬೀ ಖಹಾಫರ ಉದಾಹರಣೆ ದೇವದೂತರಲ್ಲಿ ಮೀಕಾಇಲ್‌ನಂತಿದೆ. ಭೂಮಿಯಲ್ಲಿರುವ ಜನರನ್ನು ಕ್ಷಮಿಸಬೇಕೆಂದು ಮೀಕಾಇಲ್ ದುಆ ಮಾಡುತ್ತಾರೆ. ಅಬೂಬಕರ್‌ರ ಉದಾಹರಣೆ ಪ್ರವಾದಿಗಳಲ್ಲಿ ಹಝ್ರ‍ತ್ ಇಬ್ರಾಹೀಮ್(ರ)ರಂತಾಗಿದೆ. ಅವರು ಹೀಗೆ ಹೇಳಿದ್ದರು: **ಫಮನ್ ತಬ್‌ತಗ಼ೀ ಫಇನ್ನಹೂ ಮಿನ್ನೀ ವಮನ್ ಅಸಾನಿ ಫಇನ್ನಕ ಗ಼ಫೂರುರ್ರಹೀಂ**. ಎಂದರೆ, ಯಾರು ನನ್ನ ಅನುಸರಣೆ ಮಾಡುತ್ತಾರೋ ಅವರು ಖಂಡಿತವಾಗಿಯೂ ನನ್ನವನೇ ಮತ್ತು ನನ್ನನ್ನು ಅನುಸರಿಸದವರ ಬಗ್ಗೆ ಹೇಳುವುದಾದರೆ, ಖಂಡಿತವಾಗಿಯೂ ನೀನು ಬಹಳ ಕ್ಷಮಿಸುವವನು ಮತ್ತು ಪದೇ ಪದೇ ಕರುಣೆದೋರುವವನೂ ಆಗಿದ್ದೀ. (ಕನ್‌ಝುಲ್ ಅಅ್‌ಮಾಲ್, ಸಂಪುಟ-7, ಪುಟ-10, ಕಿತಾಬುಲ್ ಫಝಾಎಲ್, ವರದಿ ಸಂಖ್ಯೆ-36132, ದಾರುಲ್ ಕುತುಬ್ ಇಲ್‌ಮಿಯ 2004)

ಹಝ್ರ‍ತ್ ಪೈಗಂಬರ್(ಸ) ಬನೂ ಖುರೈಝ್ಹ ಗೋತ್ರವನ್ನು ಸುತ್ತುವರೆದಕ್ಕೆ ಸಂಬಂಧಿಸಿ ಒಂದು ವರದಿಯಿದೆ. ಆಯಿಶ ಬಿನ್ತ್ ಸಅದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ. ಅವರ ತಂದೆಯಾದ ಸಅದ್ ಹೇಳುತ್ತಾರೆ: ಹಝ್ರ‍ತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ಎಲೈ ಸಅದ್, ಮುಂದಕ್ಕೆ ಹೋಗು ಮತ್ತು ಆ ಜನರ ಮೇಲೆ ಬಾಣ ಚಲಾಯಿಸು. ನಾನು ಬಾಣಗಳನ್ನು ಚಲಾಯಿಸಿದರೆ ಶತ್ರುಗಳಿಗೆ ತಲುಪಬಹುದಾದಷ್ಟು ಹತ್ತಿರಕ್ಕೆ ನಾನು ಮುಂದಕ್ಕೆ ಧಾವಿಸಿದೆ. ನನ್ನ ಬಳಿ 50ಕ್ಕಿಂತ ಹೆಚ್ಚು ಬಾಣಗಳು ಇದ್ದುವು. ಅವುಗಳನ್ನು ನಾವು ಕೆಲವೇ ಕ್ಷಣಗಳಲ್ಲಿ ಚಲಾಯಿಸಿದೆವು. ನಮ್ಮ ಬಿಲ್ಲುಗಳು ಮಿಡತೆಗಳ ಹಿಂಡಿನಂತೆ ಜನರ ದೇಹಗಳಲ್ಲಿ ಹೂತುಹೋದುವು ಮತ್ತು ಅವರಲ್ಲಿ ಯಾರೂ ಇಣುಕಿ ಹೊರಗೆ ನೋಡುತ್ತಿರಲಿಲ್ಲ. ಬಾಣಗಳೆಲ್ಲವೂ ಮುಗಿದುಹೋಗುವವೋ ಎಂದು ನಮಗೆ ಭಯವಿತ್ತು. ಆದ್ದರಿಂದ ನಮ್ಮಲ್ಲಿ ಕೆಲವರು ಬಾಣಗಳನ್ನು ಚಲಾಯಿಸುತ್ತಿದ್ದರು ಮತ್ತು ಕೆಲವರು ಅವುಗಳನ್ನು ಜೋಪಾನವಾಗಿರಿಸುತ್ತಿದ್ದರು.

ಹಝ್ರ‍ತ್ ಕಅ್‌ಬ್ ಬಿನ್ ಅಮ್ರ್ ಮಅ್‌ಧ಼ನಿ ಸಹ ಬಾಣ ತೂರುವವರಲ್ಲಿ ಒಬ್ಬರಾಗಿದ್ದರು. ಅವರು ಹೇಳುತ್ತಾರೆ: ಬಾಣಗಳನ್ನು ಹಾಕಲಾಗುವ ಬತ್ತಳಿಕೆಯಲ್ಲಿ ಇದ್ದ ಎಲ್ಲ ಬಾಣಗಳನ್ನು ನಾನು ಚಲಾಯಿಸಿದೆ. ರಾತ್ರಿಯಾದಾಗ ನಾವು ಅವರ ವಿರುದ್ಧ ಬಾಣಗಳನ್ನು ಚಲಾಯಿಸುವುದನ್ನು ನಿಲ್ಲಿಸಿದೆವು. ನಾವು ಬಾಣಗಳನ್ನು ಚಲಾಯಿಸಿದ್ದೆವು ಮತ್ತು ಹಝ್ರ‍ತ್ ಪೈಗಂಬರ್(ಸ) ತನ್ನ ಕುದುರೆಯಲ್ಲಿ ಸವಾರರಾಗಿದ್ದರು ಹಾಗೂ ಆಯುಧಗಳನ್ನು ಎತ್ತಿಕೊಂಡಿದ್ದರು. ಕುದುರೆ ಸವಾರರು ಅವರು ಆಸುಪಾಸಲ್ಲಿ ಇದ್ದರು. ಅನಂತರ ಹಝ್ರ‍ತ್ ಪೈಗಂಬರ್(ಸ)ರ ಆದೇಶದ ಪ್ರಕಾರ ನಾವು ನಮ್ಮ ನಮ್ಮ ತಂಗುದಾಣಗಳ ಕಡೆಗೆ ಹೊರಟೆವು ಮತ್ತು ರಾತ್ರಿ ಕಳೆದೆವು. ಹಝ್ರ‍ತ್ ಸಅದ್ ಬಿನ್ ಉಬಾದ ಕಳುಹಿಸಿದ ಖರ್ಜೂರವೇ ನಮ್ಮ ಆಹಾರವಾಗಿತ್ತು. ಆ ಖರ್ಜೂರಗಳು ಬಹಳಷ್ಟು ಇದ್ದುವು. ನಾವು ಖರ್ಜೂರಗಳನ್ನು ತಿನ್ನುತ್ತಾ ರಾತ್ರಿ ಕಳೆದುವು. ಹಝ್ರ‍ತ್ ಪೈಗಂಬರ್(ಸ), ಹಝ್ರ‍ತ್ ಅಬೂಬಕರ್(ರ) ಮತ್ತು ಹಝ್ರ‍ತ್ ಉಮರ್(ರ) ಸಹ ಖರ್ಜೂರಗಳನ್ನು ತಿನ್ನುತ್ತಿದ್ದರು. 'ಖರ್ಜೂರ ಎಷ್ಟು ಉತ್ತಮ ಆಹಾರ'ವೆಂದು ಹಝ್ರ‍ತ್ ಪೈಗಂಬರ್(ಸ) ಹೇಳುತ್ತಿದ್ದರು. (ಕಿತಾಬುಲ್ ಮಗಾಝಿ ಲಿಲ್ ವಾಕದಿ, ಸಂಪುಟ-2, ಪುಟ-6, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2013)

ಬನೂ ಖುರೈಝ್ಹರ ಕುರಿತು ಹಝ್ರ‍ತ್ ಸಅದ್ ಬಿನ್ ಮುಆಧ಼್(ರ) ತೀರ್ಪು ನೀಡಿದಾಗ ಹಝ್ರ‍ತ್ ಪೈಗಂಬರ್(ಸ) ಅವರನ್ನು ಹೊಗಳುತ್ತಾ ಹೇಳಿದರು: ನೀವು ಅಲ್ಲಾಹನ ಆದೇಶದ ಪ್ರಕಾರ ತೀರ್ಪು ನೀಡಿದ್ದೀರಿ. ಆಗ ಹಝ್ರ‍ತ್ ಸಅದ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಖುರೈಶಿಗಳೊಂದಿಗೆ ಹಝ್ರ‍ತ್ ಪೈಗಂಬರ್(ಸ)ರ ಇನ್ನೇನಾದರೂ ಯುದ್ಧ ನಡೆಯುವುದು ಎಂದು ನೀನು ವಿಧಿಸಿದರೆ, ನನ್ನನ್ನು ಅದಕ್ಕಾಗಿ ಜೀವಂತವಾಗಿ ಇರಿಸು. ಹಝ್ರ‍ತ್ ಪೈಗಂಬರ್(ಸ) ಮತ್ತು ಖುರೈಶಿಗಳ ನಡುವೆ ಯುದ್ಧ ಕೊನೆಗೊಂಡಿದೆ ಎಂದಾದರೆ, ಇನ್ನು ಮುಂದೆ ಯುದ್ಧ ನಡೆಯುವುದಿಲ್ಲವೆಂದಾದರೆ, ನನಗೆ ಮರಣವನ್ನು ನೀಡು. ಹಝ್ರ‍ತ್ ಆಯಿಶ(ರ) ಹೇಳುತ್ತಾರೆ: ಹಝ್ರ‍ತ್ ಸಅದ್‌ರ ಗಾಯ ವಾಸಿಯಾಯಿತು. ಅವರು ಆರೋಗ್ಯವಂತರಾದರು. ಅವರ ಗಾಯದ ಮಾಮೂಲಿ ಗುರುತು ಬಾಕಿಯುಳಿದಿತ್ತು. ಹಝ್ರ‍ತ್ ಪೈಗಂಬರ್(ಸ) ಅವರಿಗಾಗಿ ಹಾಕಿದ್ದ ಡೇರೆಗೆ ಅವರು ಮರಳಿಹೋದರು. ಹಝ್ರ‍ತ್ ಪೈಗಂಬರ್(ಸ), ಹಝ್ರ‍ತ್ ಅಬೂಬಕರ್(ರ) ಮತ್ತು ಹಝ್ರ‍ತ್ ಉಮರ್(ರ) ಅವರ ಬಳಿಗೆ ಹೋದರು. ಹಝ್ರ‍ತ್ ಆಯಿಶ(ರ) ಹೇಳುತ್ತಾರೆ: ಯಾರ ಕೈಯಲ್ಲಿ ಮುಹಮ್ಮದ್(ಸ)ರ ಜೀವವಿದೆಯೋ ಆ ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ನಾನು ಹಝ್ರ‍ತ್ ಉಮರ್‌ರ ಮತ್ತು ಹಝ್ರ‍ತ್ ಅಬೂಬಕರ್‌ರ ಅಳುವಿನ ವ್ಯತ್ಯಾಸವನ್ನು ಅರಿತಿದ್ದೆ. ನಾನು ಆ ಸಮಯದಲ್ಲಿ ನನ್ನ ಕೊಠಡಿಯಲ್ಲಿದ್ದೆ. ಎಂದರೆ ಹಝ್ರ‍ತ್ ಸಅದ್‌ರ ಮರಣ ಸಮೀಪವಾದಾಗ

ಅವರಿಬ್ಬರೂ ಅಳುತ್ತಿದ್ದರು. **ರುಹಮಾಉ ಬೈನಹುಂ** ಎಂದು ಅಲ್ಲಾಹನು ಹೇಳಿರುವ ಹಾಗೆಯೇ ಅವರೆಲ್ಲರೂ ಪರಸ್ಪರ ಬಹಳ ಪ್ರೀತಿಸುತ್ತಿದ್ದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–8, ಪುಟ–256–259, ವರದಿ–25610, ಆಲಿಮುಲ್ ಕುತುಬ್ 1998)

ಹುದೈಬಿಯ ಸಂಧಿಯ ಬಗ್ಗೆ ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪಿಸಲಾದಂತೆ ಹಝ್ರತ್ ಪೈಗಂಬರ್(ಸ) ಬೈತುಲ್ಲಾಹ್ ಆದ ಕಅ್‌ಬ ಭವನದ ತವಾಫ್ ಮಾಡುವುದಾಗಿ ಹಝ್ರತ್ ಪೈಗಂಬರ್(ಸ) ಕನಸನ್ನು ಕಂಡರು. ಈ ಕನಸಿನ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ) ಸಾವಿರದ ನಾನ್ನೂರು ಸಹಾಬಿಯರ ಜೊತೆಗೆ ಹಿಜರೀ 6, ಧುಲ್‌ಖಅ್‌ದ ಆರಂಭದಲ್ಲಿ ಸೋಮವಾರ ಬೆಳಿಗ್ಗೆ ಮದೀನದಿಂದ ಉಮ್ರಾ ಕರ್ಮಾನುಷ್ಠಾನ ಮಾಡಲು ಹೊರಟರು.
(ಸೀರತ್ ಖಾತಮನ್ನಬೀಈನ್, ಪುಟ–749–750)

ಮಕ್ಕದ ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರನ್ನು ಮಕ್ಕದಲ್ಲಿ ಪ್ರವೇಶಿಸುವುದರಿಂದ ತಡೆಯಲು ತಯಾರು ಮಾಡುತ್ತಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ ಅವರು ಸಹಾಬಿಯರೊಡನೆ ಇದರ ಕುರಿತು ಸಲಹೆ ಕೇಳಿದರು. ಹಝ್ರತ್ ಅಬೂಬಕರ್(ರ) ಹೀಗೆ ಸಲಹೆ ನೀಡಿದರು: ಯಾ ರಸೂಲಲ್ಲಾಹ್, ನಾವಂತು ಉಮ್ರ ಮಾಡಲು ಮಾತ್ರ ಬಂದಿದ್ದೇವೆ. ಯಾರೊಂದಿಗೂ ಯುದ್ಧ ಮಾಡಲು ಬಂದಿಲ್ಲ. ನಾವು ನಮ್ಮ ಗುರಿಯ ಕಡೆಗೆ ಹೋಗೋಣ, ಯಾರಾದರೂ ನಮ್ಮನ್ನು ಕಅ್‌ಬ ಭವನವನ್ನು ಪ್ರವೇಶಿಸುವುದರಿಂದ ತಡೆಯಲು ಪ್ರಯತ್ನಿಸಿದರೆ ನಾವು ಅವರೊಡನೆ ಯುದ್ಧ ಮಾಡೋಣ ಎಂದಾಗಿದೆ ನನ್ನ ಅಭಿಪ್ರಾಯ. (ಸುಬ್ಲುಲ್ ಹುದಾ ವರ್‌ರಶಾದ್, ಸಂಪುಟ–5, ಪುಟ–37, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹುದೈಬಿಯ ಸಂಧಿಯ ಸಂದರ್ಭದಲ್ಲಿ ಖುರೈಶಿನ ಕಡೆಯಿಂದ ಪರಸ್ಪರ ಮಾತುಕತೆ ನಡೆಸಲಿಕ್ಕಾಗಿ ಸಂಘಗಳು ಬರಲು ಶುರುವಾದಾಗ ಉರ್‌ವ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಅವರೊಡನೆ ಮಾತುಕತೆ ನಡೆಸಲು ಶುರುಮಾಡಿದರು. ಉರ್‌ವ ಹೇಳಿದನು: ಹೇ ಮುಹಮ್ಮದ್, (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನೀವು ನಿಮ್ಮ ಸಮುದಾಯವನ್ನು ನಾಶಪಡಿಸಿದರೆ, ಹೇಳಿರಿ, ನಿಮಗಿಂತ ಮುಂಚೆ ಅರೇಬಿಯರಲ್ಲಿ ಯಾರಾದರೂ ತನ್ನದೇ ಜನರನ್ನು ನಾಶಮಾಡಿದ್ದಾಗಿ ನೀವು ಕೇಳಿದ್ದೀರಾ? ಮತ್ತು ಮಾತು ಮತ್ತೊಂದಾದರೆ, ಎಂದರೆ ಖುರೈಶಿಗಳು ವಿಜಯ ಸಾಧಿಸಿದರೆ, ಅನೇಕ ಎಡೆಗಳಿಂದ ಒಟ್ಟು ಸೇರಿದ ನಿಮ್ಮ ಜೊತೆಗಾರರ ಮುಖಗಳನ್ನು ನಾನು ನೋಡುತ್ತಿದ್ದೇನೆ. ಅವರು ನಿಮ್ಮನ್ನು ಬಿಟ್ಟು ಹೋಗುವರು. ಇದನ್ನು ಕೇಳಿ ಹಝ್ರತ್ ಅಬೂಬಕರ್(ರ) ಅತ್ಯಂತ ಕಠಿಣವಾಗಿ ಹೀಗೆ ಹೇಳಿದರು: ಹೋಗು ಹೋಗು, ಹೋಗಿ ನಿನ್ನ ಲಾತ್ ವಿಗ್ರಹವನ್ನು ಚುಂಬಿಸುತ್ತಾ ಇರು. ಎಂದರೆ ಅದನ್ನು ಪೂಜೆ ಮಾಡುತ್ತಾ ಇರು. ಆಗ ಇವರು ಯಾರೆಂದು ಉರ್‌ವ ಕೇಳಿದನು. ಅಬೂಬಕರ್ ಆಗಿರುವರು ಎಂದು ಜನರು ಹೇಳಿದರು. ಉರ್‌ವ ಹೇಳಿದನು; ನೋಡಿರಿ, ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಪ್ರತಿಫಲವಾಗಿ ಈಗಲೂ ಹಿಂತಿರುಗಿಸದ ನಿಮ್ಮೊಂದು ಔದಾರ್ಯ ನನ್ನ ಮೇಲೆ ಇಲ್ಲದಿರುತ್ತಿದ್ದರೆ ನಾನು ಇದಕ್ಕೆ ಉತ್ತರ ಕೊಡುತ್ತಿದ್ದೆ. ಉರ್‌ವನ ಮೇಲೆ ಹಝ್ರತ್ ಅಬೂಬಕರ್‌ರ ಔದಾರ್ಯವೇನಾಗಿತ್ತು ಎಂದರೆ, ಒಂದು ಸಂದರ್ಭದಲ್ಲಿ ಉರ್‌ವನಿಗೆ ಪರಿಹಾರಧನ ನೀಡಬೇಕಾಗಿ ಬಂದಾಗ, ಹಝ್ರತ್ ಅಬೂಬಕರ್(ರ) ಉರ್‌ವನಿಗೆ 10 ಗರ್ಭಿಣಿ ಒಂಟೆಗಳನ್ನು ನೀಡಿ ಅವನ ಸಹಾಯ ಮಾಡಿದ್ದರು. ಹೇಗಿದ್ದರೂ ಉರ್‌ವ ಹೀಗೆ ಹೇಳಿದನು ಮತ್ತು ಹಝ್ರತ್ ಪೈಗಂಬರ್(ಸ) ಮಾತುಕತೆ ಶುರುಮಾಡಿದರು.

ಹುದೈಬಿಯ ಸಂಧಿಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಖುರೈಶರ ಒಪ್ಪಂದ ನಡೆಯುತ್ತಿತ್ತು. ಹಝ್ರತ್ ಉಮರ್ ಬಿನ್ ಖತ್ತಾಬ್ ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಕೇಳಿದೆ. ನೀವು ಸತ್ಯವಾಗಿಯೂ ಅಲ್ಲಾಹನ ಪ್ರವಾದಿಯಲ್ಲವೇ? ಏಕಿಲ್ಲವೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನಾನು ಕೇಳಿದೆ: ನಾವು ಸತ್ಯದಲ್ಲಿಯೂ ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿಯೂ ಅಲ್ಲವೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನಾನು ಹೇಳಿದೆ: ಹಾಗಾದರೆ, ನಾವು ಧರ್ಮದ ಕುರಿತು ನಿಂದನೀಯವಾದ ಶರತ್ತುಗಳನ್ನು ಏಕೆ ಅಂಗೀಕರಿಸಬೇಕು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ನಾನು ಅವನಗೆ ಅವಿಧೇಯತೆ ತೋರಿಸುವುದಿಲ್ಲ. ಅಲ್ಲಾಹನು ನನಗೆ ನೆರವು ನೀಡುವನು. ಎಂದರೆ ನಾನು ನಿಬಂಧನೆಗಳನ್ನು ಅಂಗೀಕರಿಸುತ್ತಿದ್ದೇನೆ. ಅದು ಅಲ್ಲಾಹನ ಆದೇಶಗಳಿಗೆ ವಿರುದ್ಧವಾಗಿ ಇರುವುದಲ್ಲ. ಅವನು ನನಗೆ ನೆರವು ನೀಡುವನು. ಆಗ ನಾನು ಹೇಳಿದೆ: ನಾವು ಸಮೀಪ ಕಾಲದಲ್ಲೇ ಬೈತುಲ್ಲಾಹ್ ತಲುಪಿ ಅದರ ತವಾಫ್ ಮಾಡುವೆವು ಎಂದು ನೀವು ನಮ್ಮೊಡನೆ ಹೇಳಲಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಖಂಡಿತವಾಗಿಯೂ ಹೇಳಿದ್ದೆ. ಆದರೆ ಇದೇ ವರ್ಷ ಬೈತುಲ್ಲಾಹ್ ತಲುಪುವೆವು ಎಂದು ನಾನು ಹೇಳಿರುವನೇ? ಹಾಗೆ ಹೇಳಿಲ್ಲವೆಂದು ನಾನು ಉತ್ತರಿಸಿದೆ: ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ ಖಂಡಿತವಾಗಿಯೂ ನಾವು ಬೈತುಲ್ಲಾಹ್ ಪ್ರವೇಶಿಸುವೆವು. ಅದರ ತವಾಫ್ ಸಹ ಮಾಡುವೆವು. ಇದನ್ನು ಕೇಳಿ ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ಬಳಿಗೆ ಹೋದರು ಮತ್ತು ಹೀಗೆ ಕೇಳಿದರು: ಹಝ್ರತ್ ಪೈಗಂಬರ್(ಸ) ಸತ್ಯವಾಗಿಯೂ ಅಲ್ಲಾಹನ ಪ್ರವಾದಿಯಲ್ಲವೇ? ಏಕಿಲ್ಲವೆಂದು ಹಝ್ರತ್ ಅಬೂಬಕರ್(ರ) ಹೇಳಿದರು. ನಾವು ಸತ್ಯದಲ್ಲಿಯೂ ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿಯೂ ಅಲ್ಲವೇ? ಎಂದು ಉಮರ್(ರ) ಕೇಳಿದರು. ಹೌದೆಂದು ಹಝ್ರತ್ ಅಬೂಬಕರ್(ರ) ಹೇಳಿದರು. ಹಝ್ರತ್ ಉಮರ್(ರ) ಕೇಳಿದರು: ಹಾಗಾದರೆ, ನಾವು ಧರ್ಮದ ಕುರಿತು ನಿಂದನೀಯವಾದ ಶರತ್ತುಗಳನ್ನು ಏಕೆ ಅಂಗೀಕರಿಸಬೇಕು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಎಲೈ ಮನುಷ್ಯಾ, ನಿಸ್ಸಂಶಯವಾಗಿಯೂ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸಂದೇಶವಾಹಕರಾಗಿರುವರು. ಪ್ರವಾದಿ ತನ್ನ ಪ್ರಭುವಿಗೆ ಅವಿಧೇಯನಾಗಿರುವುದಿಲ್ಲ. ಅಲ್ಲಾಹನು ಖಂಡಿತವಾಗಿಯೂ ಅವರ ಸಹಾಯವನ್ನು ಮಾಡುವನು. ಹಝ್ರತ್ ಪೈಗಂಬರ್(ಸ) ಹೇಳಿದ್ದ ಬಹುತೇಕ ಅದೇ ಮಾತುಗಳನ್ನು ಹಝ್ರತ್ ಅಬೂಬಕರ್(ರ) ಹೇಳಿಕೊಟ್ಟರು. ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಉಮರ್, ಹಝ್ರತ್ ಪೈಗಂಬರ್(ಸ) ಮಾಡಿರುವ ಒಪ್ಪಂದವನ್ನು ದೃಢವಾಗಿ ಹಿಡಿ. ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಸತ್ಯದಲ್ಲಿರುವರು. ಆಗ ಹಝ್ರತ್ ಉಮರ್(ರ) ಹೇಳಿದರು: ನಾವು ಬೈತುಲ್ಲಾಹ್ ತಲುಪಿ ಅದರ ತವಾಫ್ ಮಾಡುವೆವು ಎಂದು ಹಝ್ರತ್ ಪೈಗಂಬರ್(ಸ) ನಮ್ಮೊಡನೆ ಹೇಳಿರಲಿಲ್ಲವೇ? ಹಝ್ರತ್ ಅಬೂಬಕರ್(ರ) ಹೇಳಿದರು: ಹೌದು, ಆದರೆ ಇದೇ ವರ್ಷ ಬೈತುಲ್ಲಾಹ್ ತಲುಪುವೆವು ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರೇ? ಹಾಗೆ ಹೇಳಿಲ್ಲವೆಂದು ಹಝ್ರತ್ ಉಮರ್(ರ) ಉತ್ತರಿಸಿದರು: ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಹಾಗಾದರೆ ಖಂಡಿತವಾಗಿಯೂ ನಾವು ಬೈತುಲ್ಲಾಹ್ ಪ್ರವೇಶಿಸುವೆವು. ಅದರ ತವಾಫ್ ಸಹ ಮಾಡುವೆವು. ಝೊಹರಿ ಹೇಳುತ್ತಾರೆ: ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ನಾನು ಈ ತಪ್ಪಿನ ಕಾರಣದಿಂದ, ಅದಕ್ಕೆ ಪ್ರಾಯಶ್ಚಿತವಾಗಿ ಅನೇಕ ಸತ್ಕರ್ಮಗಳನ್ನು ಮಾಡಿದ್ದೆ.
(ಸಹೀಹ್ ಬುಖಾರಿ, ಕಿತಾಬುಶ್ಶುರೂತ್, ಹದೀಸ್–2731–2732) (ಉಮ್ದತುಲ್ ಖಾರಿ, ಸಂಪುಟ–14, ಪುಟ–16, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್) ಇದು ಬುಖಾರಿಯಿಂದ ಪಡೆಯಲಾಗಿದೆ.

ಇದೇ ಹುದೈಬಿಯ ಸಂಧಿಯ ವಿವರಣೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಉರ್‌ವ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದರು ಮತ್ತು ಹಝ್ರತ್ ಪೈಗಂಬರ್(ಸ)ರೊಂದಿಗೆ ಮಾತುಕತೆ ನಡೆಸಲು ಶುರುಮಾಡಿದರು. ಬುದೈಲ್ ಬಿನ್ ವರ್‌ಖರ ಮುಂದೆ ಹೇಳಿದ ಅದೇ ಮಾತುಗಳನ್ನು ಅವನ ಮುಂದೆ ಹಝ್ರತ್ ಪೈಗಂಬರ್(ಸ) ಹೇಳಿದರು. ಉರ್‌ವ ಹಝ್ರತ್ ಪೈಗಂಬರ್(ಸ)ರ ಅಭಿಪ್ರಾಯದೊಂದಿಗೆ ಬಹುತೇಕ ಒಮ್ಮತವನ್ನು ಹೊಂದಿದ್ದರು. ಆದರೆ ಖುರೈಶಿಯರ ಪ್ರತಿನಿಧಿಯೆಂಬ ತನ್ನ ಕರ್ತವ್ಯವನ್ನು ಈಡೇರಿಸಲಿಕ್ಕಾಗಿ ಮತ್ತು ಅವರ ಪರವಾಗಿ ಹೆಚ್ಚಿನ ಶರತ್ತುಗಳನ್ನು ಇರಿಸಲಿಕ್ಕಾಗಿ ಹೀಗೆ ಹೇಳಿದನು: ಹೇ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನೀವು ಈ ಯುದ್ಧದಲ್ಲಿ ನಿಮ್ಮ ಕೋಮನ್ನು ಅಳಿಸಿ ಹಾಕಿದರೆ, ನಿಮಗಿಂತ ಮುಂಚೆ ಅರೇಬಿಯರಲ್ಲಿ ಇಂತಹ ದೌರ್ಜನ್ಯವನ್ನು ಮಾಡಿದ ಯಾರದಾದರೂ ಹೆಸರನ್ನು ನೀವು ಕೇಳಿದ್ದೀರಾ? ಆದರೆ ಮಾತು ಮತ್ತೊಂದಾದರೆ, ಎಂದರೆ ಖುರೈಶಿಗಳು ವಿಜಯ ಸಾಧಿಸಿದರೆ ನಿಮ್ಮ ಸುತ್ತಮುತ್ತ ಇರುವ ಜನರು ನಿಮ್ಮಿಂದ ದೂರಹೋಗುವುದರಲ್ಲಿ ತಡಮಾಡಲಿಕ್ಕಿಲ್ಲ ಎಂದು ಅವರ ಮುಖಗಳನ್ನು ನೋಡಿ ನಾನು ಹೇಳಬಲ್ಲೆ. ಅವರೆಲ್ಲರೂ ನಿಮ್ಮನ್ನು ಬಿಟ್ಟುಬಿಡುವರು. ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲೇ ಕುಳಿತುಕೊಂಡಿದ್ದ ಹಝ್ರತ್ ಅಬೂಬಕರ್(ರ)ರಿಗೆ ಉರ್‌ವನ ಮಾತುಗಳನ್ನು ಕೇಳಿ ಕೋಪಬಂತು ಮತ್ತು ಹೀಗೆ ಹೇಳಿದರು: ಹೋಗು ಹೋಗು, ಹೋಗಿ ನಿಮ್ಮ ಲಾತ್ ವಿಗ್ರಹವನ್ನು ಚುಂಬಿಸುತ್ತಾ ಇರು. ನಾವು ಅಲ್ಲಾಹನ ಪ್ರವಾದಿಯನ್ನು ಬಿಟ್ಟುಬಿಡುವೆವೋ? ಲಾತ್ ವಿಗ್ರಹವೂ ಬನೂ ಸಖೀಫ್ ಗೋತ್ರದ ಒಂದು ಹೆಸರುವಾಸಿ ವಿಗ್ರಹವಾಗಿತ್ತು. ಹಝ್ರತ್ ಅಬೂಬಕರ್(ರ) ಹೇಳಿದ ಮಾತಿನ ಅರ್ಥವೇನೆಂದರೆ, ನೀವು ವಿಗ್ರಹ ಆರಾಧಕರಾಗಿರುವಿರಿ ಮತ್ತು ನಾವು ಅಲ್ಲಾಹನ ಆರಾಧಕರಾಗಿದ್ದೇವೆ. ನೀವು ವಿಗ್ರಹಕ್ಕಾಗಿ ಸಹನೆ ಮತ್ತು ಸ್ಥೈರ್ಯವನ್ನು ತೋರಿಸುತ್ತಿರುವ ಸ್ಥಿತಿಯಲ್ಲಿ ಮತ್ತು ನಾವು ಅಲ್ಲಾಹನ ಮೇಲೆ ನಂಬಿಕೆ ಇರಿಸಿರುವಾಗ ನಾವು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟು ಓಡಿಹೋಗಲು ಸಾಧ್ಯವೇ? ಉರ್‌ವ ಕೋಪಗೊಂಡು ಹೀಗೆ ಕೇಳಿದನು: ಈ ರೀತಿಯಾಗಿ ನನ್ನ ಮಾತನ್ನು ತಡೆಯುವ ವ್ಯಕ್ತಿ ಯಾರು? ಅವರು ಅಬೂಬಕರ್ ಆಗಿರುವರು ಎಂದು ಜನರು ಹೇಳಿದರು. ಅಬೂಬಕರ್‌ರ ಹೆಸರು ಕೇಳಿ ಉರ್‌ವನ ಕಣ್ಣುಗಳು ನಾಚಿಕೆಯಿಂದ ತಗ್ಗಿದುವು. ಉರ್‌ವ ಹೇಳಿದನು: ಹೇ ಅಬೂಬಕರ್, ನಿಮ್ಮೊಂದು ಔದಾರ್ಯ ನನ್ನ ಮೇಲೆ ಇಲ್ಲದಿರುತ್ತಿದ್ದರೆ, ದೇವನಾಣೆ, ನೀವು ಹೇಳಿದ್ದಕ್ಕೆ ಹೇಗೆ ಉತ್ತರ ಕೊಡಬೇಕೆಂದು ಆಗ ನಾನು ತೋರಿಸುತ್ತಿದ್ದೆ.

(ಸೀರತ್ ಖಾತಮನ್ನಬೀಈನ್, ಪುಟ–756–757)

ಬುಖಾರಿಯ ಒಂದು ವರದಿ ಹೀಗಿದೆ: ಹುದೈಬಿಯಾ ಸಂಧಿಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಖುರೈಶಿಗಳ ಒಪ್ಪಂದ ನಡೆಯುತ್ತಿತ್ತು. ಶರತ್ತುಗಳು ನಿರ್ಣಯಿಸಲಾಗಿದ್ದುವು. ಆಗ ಸುಹೈಲ್ ಬಿನ್ ಅಮ್ರ್‌ನ ಮಗನಾದ ಅಬೂಜಂದಲ್ ನಡುಗುತ್ತಾ ಅಲ್ಲಿಗೆ ತಲುಪಿದನು. ಮಕ್ಕದ ಕಡೆಯಿಂದ ರಾಯಭಾರಿಯಾಗಿ ಬಂದಿದ್ದ ಸುಹೈಲ್ ಬಿನ್ ಅಮ್ರ್ ಅಬೂಜಂದಲ್‌ನನ್ನು ಮಕ್ಕದ ಕಡೆಗೆ ಮರಳಿಸಲು ಬೇಡಿಕೊಂಡನು. ಹಝ್ರತ್ ಪೈಗಂಬರ್(ಸ) ಅವರನ್ನು ಖುರೈಶಿಯರಿಗೆ ಮರಳಿಸಿದರು. (ಸಹೀಹ್ ಬುಖಾರಿ, ಕಿತಾಬುಶ್ಶುರೂತ್, ಹದೀಸ್–2731–2732)

ಅಬುಜಂದಿಲಿನ ಮೇಲೆ ನಡೆಯುತ್ತಿರುವ ದೌರ್ಜನ್ಯ ಕಾರಣದಿಂದ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರೊಂದಿಗೆ ಹೀಗೆ ಮಾತನಾಡಿದ್ದರು: ನೀವು ಅಲ್ಲಾಹನ ಸತ್ಯಪ್ರವಾದಿಯಲ್ಲವೇ? ಹಾಗಿರುವಾಗ ನಾವೇಕೆ ಹೀಗೆ ನಿಂದ್ಯರಾಗಬೇಕು. ಹೇಗಿದ್ದರೂ ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿಶದವಾಗಿ ಬರೆದಿರುವರು.

ಅಬುಜಂದಲಿನ ಮೇಲೆ ನಡೆಯುತ್ತಿದ್ದ ಅತಿರೇಕದ ದೃಶ್ಯವನ್ನು ಕಂಡು ಧಾರ್ಮಿಕ ಅಭಿಮಾನದಿಂದ ಮುಸ್ಲಿಮರಿಗೆ ಬಹಳ ಕೋಪ ಮತ್ತು ದುಃಖವಾಗುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಮುಂದೆ ಅದನ್ನೆಲ್ಲ ಅಡಗಿಸಿ ಸುಮ್ಮನಿದ್ದರು. ಕೊನೆಗೆ ಅದನ್ನೆಲ್ಲ ಹಝ್ರತ್ ಉಮರ್‌ರಿಂದ(ರ) ಸಹಿಸಲು ಸಾಧ್ಯವಾಗಲಿಲ್ಲ. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಬಂದರು ಮತ್ತು ನಡುಗುವ ಸ್ವರದಲ್ಲಿ ಹಝ್ರತ್ ಪೈಗಂಬರ್‌ರೊಡನೆ(ಸ) ಕೇಳಿದರು: ನೀವು ಅಲ್ಲಾಹನ ಸತ್ಯಸಂಧರಾದ ಪ್ರವಾದಿಯಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಸಂಗತಿ ಹಾಗೆಯೇ ಆಗಿದೆ. ಹಝ್ರತ್ ಉಮರ್(ರ) ಹೇಳಿದರು: ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿಯಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಸಂಗತಿ ಹಾಗೆಯೇ ಆಗಿದೆ. ಹಝ್ರತ್ ಉಮರ್(ರ) ಕೇಳಿದರು: ಹಾಗಾದರೆ, ನಾವು ಸತ್ಯಧರ್ಮದ ವಿಷಯದಲ್ಲಿ ಈ ನಿಂದತೆಯನ್ನು ಏಕೆ ಸಹಿಸಬೇಕು? ಹಝ್ರತ್ ಉಮರ್(ರ)ರ ಸ್ಥಿತಿಯನ್ನು ಕಂಡು ಹೃಸ್ವವಾಗಿ ಹಝ್ರತ್ ಪೈಗಂಬರ್(ಸ) ಹೇಳಿದರು: ನೋಡು ಉಮರ್, ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ಅವನ ಇಚ್ಛೆಯನ್ನು ನಾನು ಬಲ್ಲೆನು. ಅವನ ಇಂಗಿತಕ್ಕೆ ವಿರುದ್ಧವಾಗಿ ನನಗೆ ಹೋಗಲು ಸಾಧ್ಯವಲ್ಲ. ಅಲ್ಲಾಹನೇ ನನ್ನ ಸಹಾಯಕ. ಹಝ್ರತ್ ಉಮರ್(ರ)ರ ಕೋಪ ವರ್ಧಿಸುತ್ತಾ ಹೋಯಿತು. ಹಝ್ರತ್ ಉಮರ್(ರ) ಕೇಳಿದರು: ನಾವು ಬೈತುಲ್ಲಾಹ್‌ದ ತವಾಫ್ ಮಾಡುವೆವು ಎಂದು ನೀವು ನಮ್ಮೊಡನೆ ಹೇಳಿರಲಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಖಂಡಿತವಾಗಿಯೂ ಹೇಳಿದ್ದೆ. ಆದರೆ ಇದೇ ವರ್ಷ ತವಾಫ್ ಮಾಡುವೆವು ಎಂದು ನಾನು ಹೇಳಿರುವನೇ? ಹಝ್ರತ್ ಉಮರ್(ರ) ಹೇಳಿದರು: ಈ ವರ್ಷ ಹೋಗುವೆವು ಎಂದು ಹೇಳಲಿಲ್ಲವೆಂಬುದು ಸರಿಯೇ ಆಗಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ಕಾಯುತ್ತಾ ಇರು. ಖಂಡಿತವಾಗಿಯೂ ನೀವು ಮಕ್ಕದಲ್ಲಿ ಪ್ರವೇಶಿಸುವಿರಿ. ಬೈತುಲ್ಲಾಹ್‌ದ ತವಾಫ್ ಮಾಡುವಿರಿ. ಈ ಆವೇಶದ ಸ್ಥಿತಿಯಲ್ಲಿ ಹಝ್ರತ್ ಉಮರ್‌ರಿಗೆ(ಸ) ಸಮಾಧಾನವಾಗಲಿಲ್ಲ. ಅವರು ಅಲ್ಲಿಂದ ಎದ್ದುನಿಂತು ಹಝ್ರತ್ ಅಬೂಬಕರ್‌ರ(ರ) ಬಳಿಗೆ ಹೋದರು. ಅವರೊಡನೆಯೂ ಇದೇ ರೀತಿಯ ಆವೇಶದ ಮಾತುಗಳನ್ನಾಡಿದರು. ಹಝ್ರತ್ ಅಬೂಬಕರ್(ರ) ಸಹ ಅದೇ ರೀತಿಯ ಉತ್ತರವನ್ನು ನೀಡಿದರು. ಆದರೆ ಅದರೊಂದಿಗೆ ಹಝ್ರತ್ ಉಮರ್‌ರನ್ನು(ರ) ಉಪದೇಶಿಸುತ್ತಾ ಹಝ್ರತ್ ಅಬೂಬಕರ್(ರ) ಹೇಳಿದರು: ನೋಡು ಉಮರ್, ಜಾಗರೂಕತೆಯಿಂದ ಇರು. ಹಝ್ರತ್ ಪೈಗಂಬರರ(ಸ) ಪೀಠದಲ್ಲಿ ನೀನು ಇರಿಸಿರುವ ಕೈಯನ್ನು ಸಡಿಲಗೊಳಿಸಬೇಡ. ಏಕೆಂದರೆ, ನಾವು ಯಾರ ಕೈಯಲ್ಲಿ ಕೈಯಿಟ್ಟಿದ್ದೇವೆಯೋ ಅವರು ಸತ್ಯವಂತರು.

ಹಝ್ರತ್ ಉಮರ್(ರ) ಹೇಳುತ್ತಾರೆ: ಆ ಸಮಯದಲ್ಲಿ ನಾನು ಆವೇಶದಿಂದ ಈ ಎಲ್ಲ ಮಾತುಗಳನ್ನು ಹೇಳಿದ್ದೆ. ಆದರೆ ಅನಂತರ ನಾನು ಬಹಳ ಲಜ್ಜಿತನಾದೆನು. ನಾನು ಪಶ್ಚಾತ್ತಾಪವೆಂಬ ರೀತಿಯಲ್ಲಿ ಮತ್ತು ಈ ದೌರ್ಬಲ್ಯದ ಪ್ರಭಾವವನ್ನು ತೊಳೆದು ಹಾಕಲಿಕ್ಕಾಗಿ ಅನೇಕ ಐಚ್ಛಿಕ ಸತ್ಕರ್ಮಗಳನ್ನು ಮಾಡಿದೆ. ಎಂದರೆ ದಾನಧರ್ಮಗಳು, ಉಪವಾಸ, ನಫ್ಲ್ ನಮಾಝ್‌ಗಳು ಮತ್ತು ಗುಲಾಮರನ್ನು ಸ್ವತಂತ್ರಗೊಳಿಸಿದೆ. (ಸೀರತ್ ಖಾತಮನ್ನಬೀಈನ್, ಪುಟ–767–768)

ಹಝ್ರತ್ ಮುಸ್ಲಿಹ್ ಮೌಊದ್(ರ) ಹುದೈಬಿಯ ಸಂಧಿಯ ಘಟನೆಗಳನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ:

ಹಝ್ರತ್ ಪೈಗಂಬರ್(ಸ) ಕಅ್‌ಬ ಭವನದ ಕಡೆಗೆ ತವಾಫ್ ಮಾಡಲು ಹೋಗಲು ಹೊರಟಾಗ, ಈ ಮಾಹಿತಿಯನ್ನು ಮಕ್ಕದ ಸತ್ಯನಿಷೇಧಿಗಳು ತಿಳಿದುಕೊಂಡು ತಮ್ಮ ಒಬ್ಬ ಸರದಾರನನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಈ ವರ್ಷ ನೀವು ತವಾಫ್ ಮಾಡಲು ಬರಬೇಡಿರಿ ಮತ್ತು ಬರುವ ಯಾವುದಾದರೂ ವರ್ಷಕ್ಕೆ ಅದನ್ನು ಮುಂದೂಡಬೇಕೆಂದು ಹೇಳಿಕೊಳ್ಳಲು ಸರದಾರನನ್ನು ಮಕ್ಕದವರು ಕಳುಹಿಸಿದ್ದರು. ಆ ಸರದಾರ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಮಾತುಕತೆ ನಡೆಸಲು ಶುರುಮಾಡಿದನು. ಮಾತನಾಡುವಾಗ ಅವನು ಹಝ್ರತ್ ಪೈಗಂಬರ್(ಸ)ರ ಗಡ್ಡದ ಕೂದಲನ್ನು ಸವರುತ್ತಾ ಹೀಗೆ ಹೇಳಿದನು: ನೀವು ಈ ಬಾರಿ ತವಾಫ್ ಮಾಡಬೇಡಿರಿ. ಬರುವ ಯಾವುದಾದರೂ ವರ್ಷಕ್ಕೆ ಅದನ್ನು ಮುಂದೂಡಿರಿ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾವುದಾದರೂ ಮಾತನ್ನು ಒಪ್ಪಿಕೊಳ್ಳುವಂತೆ ಮಾಡಲು ಬೇಡಿಕೆಯೆಂಬಂತೆ ಮುಂದಿರುವ ವ್ಯಕ್ತಿಯ ಗಡ್ಡವನ್ನು ಸ್ಪರ್ಶಿಸುವುದು ಅಥವಾ ತನ್ನ ಸ್ವಂತ ಗಡ್ಡವನ್ನು ಸವರಿಕೊಂಡು ತಾನೊಬ್ಬ ಹಿರಿಯ ವ್ಯಕ್ತಿಯೆಂದೂ ನನ್ನ ಮಾತನ್ನು ಅಂಗೀಕರಿಸು ಎಂದೂ ಹೇಳುವುದು ಏಶಿಯದವರ ರೂಢಿಯಾಗಿದೆ. ಅದೇ ರೂಢಿಯಂತೆ ಆ ಸರದಾರ ಹಝ್ರತ್ ಪೈಗಂಬರ್(ಸ)ರ ಗಡ್ಡವನ್ನು ಮುಟ್ಟಿದನು. ಇದನ್ನು ನೋಡಿಕೊಂಡು ಒಬ್ಬ ಸಹಾಬಿ ಮುಂದಕ್ಕೆ ಬಂದು ತನ್ನ ಖಡ್ಗದ ಹಿಡಿಯಲ್ಲಿ ಕೈಯಿಟ್ಟುಕೊಂಡು ಹೀಗೆ ಹೇಳಿದನು: ನೀನು ನಿನ್ನ ಕೊಳಕು ಕೈಯನ್ನು ಹಿಂದಕ್ಕೆ ಸರಿಸು. ಖಡ್ಗದ ಹಿಡಿಯನ್ನು ಹಿಡಿದ ಸಹಾಬಿಯನ್ನು ಗುರುತುಹಿಡಿದ ಸರದಾರ ಹೀಗೆ ಹೇಳಿದನು: ನಾನೊಮ್ಮೆ ಔದಾರ್ಯ ಮಾಡಿದ ವ್ಯಕ್ತಿಯಲ್ಲವೇ ನೀನು? ಇದನ್ನು ಕೇಳಿ ಆ ಸಹಾಬಿ ಸುಮ್ಮನಾದರು ಮತ್ತು ಹಿಂದಕ್ಕೆ ಸರಿದರು. ಸರದಾರನು ಪುನಃ ಬೇಡಿಕೆಯಿರಿಸುತ್ತಾ ಹಝ್ರತ್ ಪೈಗಂಬರ್(ಸ)ರ ಗಡ್ಡಕ್ಕೆ ಕೈಯಿಟ್ಟರು. ಸಹಾಬಿಯರು ಹೇಳುತ್ತಾರೆ: ಸರದಾರನು ಈ ರೀತಿಯಾಗಿ ಕೈಯಿಡುವುದನ್ನು ಕಂಡು ನಮಗೆ ತೀವ್ರ ಕೋಪಬರುತ್ತಿತ್ತು. ಈ ಸರದಾರನ ಔದಾರ್ಯ ಲಭಿಸದ ಯಾರಾದರೂ ನಮ್ಮಲ್ಲಿ ಇದ್ದರೆ ಎಷ್ಟು ಚೆನ್ನವೆಂದು ನಾವು ಬಯಸುತ್ತಿದ್ದೆವು. ಅಷ್ಟರಲ್ಲಿ ಒಬ್ಬ ವ್ಯಕ್ತಿ ನಮ್ಮ ನಡುವಿನಿಂದ ಮುಂದಕ್ಕೆ ಹೋದರು. ಅವರು ತಲೆಯಲ್ಲಿ ತಲೆಕವಚವನ್ನು ಧರಿಸಿದ್ದರು ಮತ್ತು ದೇಹದಲ್ಲಿ ಯುದ್ಧ ವಸ್ತ್ರವನ್ನು ಹಾಕಿಕೊಂಡಿದ್ದರು. ಅವರು ಬಹಳ ಆವೇಶದಿಂದ ಸರದಾರನನ್ನು ಸಂಬೋಧಿಸಿ ಹೀಗೆ ಹೇಳಿದರು: ನಿನ್ನ ಕೊಳಕು ಕೈಯನ್ನು ಹಿಂದಕ್ಕೆ ಸರಿಸು. ಹೀಗೆ ಹೇಳಿದ್ದ ವ್ಯಕ್ತಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಸರದಾರನು ಅವರನ್ನು ಗುರುತಿಸಿದಾಗ ಹೀಗೆ ಹೇಳಿದನು: ಸರಿ, ನಾನು ನಿಮ್ಮೊಡನೆ ಏನೂ ಹೇಳುವಂತಿಲ್ಲ. ಏಕೆಂದರೆ, ನಿಮ್ಮ ಮೇಲೆ ನನ್ನ ಯಾವುದೇ ಔದಾರ್ಯವಿಲ್ಲ. (ಹಿಂದುಸ್ತಾನಿ ಉಲ್ಜ್ಹನೋಂ ಕಾ ಆಸಾನ್ ಹಲ್, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–560)

ಹಿಜರೀ 6 ಧುಲ್‌ಖಾದ ತಿಂಗಳಲ್ಲಿ ಹುದೈಬಿಯ ಸಂಧಿಯ ಸಂದರ್ಭದಲ್ಲಿ ಒಪ್ಪಂದವನ್ನು ಬರೆಯಲಾಗಿತ್ತು. ಈ ವಿವರಣೆ ಸೀರತ್ ಖಾತಮುನ್ನಬಿಯ್ಯೀನ್‌ನಿಂದ ತೆಗೆಯಲಾಗಿದೆ. ಈ ಒಪ್ಪಂದದ ಎರಡು ನಕಲುಪ್ರತಿಗಳನ್ನು ತಯಾರಿಸಲಾಗಿದ್ದುವು. ಸಾಕ್ಷಿಯಾಗಿ ಉಭಯ ಪಕ್ಷಗಳ ಅನೇಕ ಆದರಣೀಯ ವ್ಯಕ್ತಿಗಳು ಅದರಲ್ಲಿ ಸಹಿ ಮಾಡಿದ್ದರು. ಮುಸ್ಲಿಮರ ಕಡೆಯಿಂದ ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್ ಮತ್ತು ಅಬೂ ಉಬೈದ ಜರ್ರಾಹ್ ಸಹಿ ಮಾಡಿದ್ದರು. ಇಸ್ಲಾಮಿನಲ್ಲಿ ಹುದೈಬಿಯ ಸಂಧಿಗಿಂತ ದೊಡ್ಡ ಬೇರೆ ವಿಜಯವಿಲ್ಲವೆಂದು ಹಝ್ರತ್ ಅಬೂಬಕರ್(ರ) ಹೇಳಿಕೊಳ್ಳುತ್ತಿದ್ದರು. (ಸೀರತ್ ಖಾತಮನ್ನಬೀಈನ್, ಪುಟ–769)

ಹಝ್ರತ್ ಅಬೂಬಕರ್(ರ)ರ ದಂಡಯಾತ್ರೆ ಬನೂಫಝಾರ್ದುದ ಕಡೆಗೆ. ಇದರ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ. ಈ ಯುದ್ಧ ಹಿಜರಿ 6ರಲ್ಲಿ ನಡೆದಿತ್ತು. ಬನೂಫಝ್ಝಾರ ಗೋತ್ರ ನಜದ್ ಮತ್ತು ಅಲ್‌ಖುರಾ ಕಣಿವೆಯಲ್ಲಿ ನೆಲೆಸಿತ್ತು. (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–5, ಪುಟ–64, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ತಬ್‌ಕಾತುಲ್ ಕುಬ್ರ ಮತ್ತು ಸೀರತ್ ಇಬ್ನು ಹಿಶಾಮ್‌ನಲ್ಲಿ ಹೀಗೆ ಬರೆಯಲಾಗಿದೆ: ಈ ಸೈನ್ಯದ ತುಕಡಿಯನ್ನು ಹಝ್ರತ್ ಝೈದ್ ಬಿನ್ ಹಾರಿಸರ ನೇತೃತ್ವದಲ್ಲಿ ಕಳುಹಿಸಲಾಗಿತ್ತು. (ಅತ್ತಬಖಾತುಲ್ ಕುಬ್ರ, ಭಾಗ–2, ಪುಟ–69, ದಾರುಲ್ ಕುತುಬ್ ಬೈರೂತ್ 2017) (ಅಸ್ಸೀರತುನ್ನಬವಿಯ ಲಿಇಬ್ನೆ ಹಿಶ್ಶಾಮ್, ಪುಟ–875, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಆದರೆ ಸಹೀಹ್ ಮುಸ್ಲಿಂ ಮತ್ತು ಸುನನ್ ಅಬೀ ದಾವೂದಿನ ಹದೀಸ್‌ನಿಂದ ತಿಳಿದುಬರುವುದೇನೆಂದರೆ, ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಈ ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ್ದರು ಎಂದಾಗಿದೆ. ಸಹೀಹ್ ಮುಸ್ಲಿಮ್‌ನಲ್ಲಿ ಅಯಾಸ್ ಬಿನ್ ಸರ್‌ಮಾ ವರದಿ ಮಾಡುತ್ತಾರೆ: ನನ್ನೊಂದಿಗೆ ನನ್ನ ತಂದೆ ಹೇಳಿದರು: ನಾವು ಫಝ್ಝಾರ ಗೋತ್ರದೊಂದಿಗೆ ಯುದ್ಧ ಮಾಡಿದೆವು. ನಮ್ಮ ಸೇನಾಧಿಪತಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಅವರನ್ನು ಹಝ್ರತ್ ಪೈಗಂಬರ್(ಸ) ನಮ್ಮ ಅಮೀರ್‌ರನ್ನಾಗಿ ನಿಶ್ಚಯಿಸಿದ್ದರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–4573) (ಸುನನ್ ಅಬಿ ದಾವೂದ್, ಕಿತಾಬುಲ್ ಜಿಹಾದ್, ಹದೀಸ್–2697)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಸಹಾಬಿಯರ ಒಂದು ಸಂಘವನ್ನು ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ಬನೂಫಝ್ಝಾರದ ಕಡೆಗೆ ಕಳುಹಿಸಿದರು. ಈ ಗೋತ್ರ ಆ ಸಮಯದಲ್ಲಿ ಮುಸ್ಲಿಮರ ವಿರುದ್ಧ ಹೋರಾಡಲು ತಯಾರಾಗಿ ನಿಂತಿತ್ತು. ಈ ಸೈನಿಕ ತುಕಡಿಯಲ್ಲಿ ಸಲ್ಮಾ ಬಿನ್

ಅಕೂಅ್ ಸಹ ಇದ್ದರು. ಅವರು ಪ್ರಸಿದ್ಧ ಬಿಲ್ಲುಗಾರರಾಗಿದ್ದರು ಮತ್ತು ಅವರು ಓಟದಲ್ಲಿ ವಿಶೇಷವಾಗಿ ನಿಪುಣರಾಗಿದ್ದರು. ಸಲ್ಮಾ ಬಿನ್ ಅಕೂಅ್ ಹೇಳುತ್ತಾರೆ: ಬೆಳಿಗ್ಗಿನ ನಮಾಝಿನ ಸಮಯದಲ್ಲಿ ನಾವು ಆ ಗೋತ್ರದ ತಂಗುದಾಣಕ್ಕೆ ತಲುಪಿದೆವು. ನಾವು ನಮಾಝ್ ನಿರ್ವಹಿಸಿ ಮುಗಿಸಿದಾಗ ಹಝ್ರತ್ ಅಬೂಬಕರ್(ರ) ನಮ್ಮೊಡನೆ ದಾಳಿ ನಡೆಸಲು ಆದೇಶಿಸಿದರು. ನಾವು ಘಝಾರ ಗೋತ್ರದೊಂದಿಗೆ ಹೋರಾಡುತ್ತಾ ಅವರ ಕಾರಂಜಿಯ ತನಕ ತಲುಪಿದೆವು. ಬಹುದೇವಾರಾಧಕರ ಅನೇಕ ಜನರು ಕೊಲ್ಲಲ್ಪಟ್ಟರು. ಅನಂತರ ಅವರು ಯುದ್ಧ ಮೈದಾನ ಬಿಟ್ಟು ಓಡಿಹೋದರು. ನಾವು ಅನೇಕ ಜನರನ್ನು ಬಂಧಿಸಿದೆವು. ಪರಾರಿಯಾಗುವವರಲ್ಲಿ ಒಂದು ಸಂಘ ಮಹಿಳೆ ಮತ್ತು ಮಕ್ಕಳದ್ದೂ ಇತ್ತು. ಅವರು ಬೇಗ ಬೇಗನೇ ಸಮೀಪದ ಪರ್ವತದ ಕಡೆಗೆ ಓಡಿ ಹೋಗುತ್ತಿದ್ದರು. ನಾನು ಅವರ ಮತ್ತು ಪರ್ವತದ ನಡುವೆ ಬಾಣಗಳನ್ನು ತೂರಲು ಶುರುಮಾಡಿದೆ. ಆಗ ಆ ಸಂಘ ಭಯಗೊಂಡು ನಿಂತಿತು. ನಾವು ಅವರನ್ನು ಬಂಧಿಸಿದೆವು. ಆ ಬಂಧಿಗಳಲ್ಲಿ ವೃದ್ಧೆಯಾದ ಮಹಿಳೆಯೊಬ್ಬಳೂ ಇದ್ದಳು. ಅವಳು ಕೆಂಪು ಬಣ್ಣದ ಚರ್ಮದ ಚಾದರವನ್ನು ಹೊದ್ದುಕೊಂಡಿದ್ದಳು. ಅವಳೊಂದಿಗೆ ಸುಂದರಿಯಾದ ಒಬ್ಬಳು ಹುಡುಗಿಯಿದ್ದಳು. ನಾನು ಅವರನ್ನೆಲ್ಲ ಗದರಿಸಿ ಹಝ್ರತ್ ಅಬೂಬಕರ್(ರ)ರ ಬಳಿಗೆ ಕೊಂಡುಹೋದೆನು. ಅವರು ಆ ಹುಡುಗಿಯನ್ನು ನನಗೆ ಮೇಲ್ನೋಟವಹಿಸಲು ನೀಡಿದರು. ಅನಂತರ ನಾವು ಮದೀನಕ್ಕೆ ಬಂದಾಗ ಹಝ್ರತ್ ಪೈಗಂಬರ್(ಸ) ಅವಳನ್ನು ನನ್ನಿಂದ ಪಡೆದುಕೊಂಡು ಅವಳನ್ನು ಮಕ್ಕಕ್ಕೆ ಮರಳಿಸಿದರು. ಅವಳ ಬದಲಾಗಿ ಮಕ್ಕದವರು ಬಂಧಿಸಿದ ಕೆಲವು ಮುಸ್ಲಿಮರಾದ ಕೈದಿಗಳ ಬಿಡುಗಡೆಯನ್ನು ಪಡೆದರು. ಅವರನ್ನು ಮಕ್ಕಾ ನಿವಾಸಿಗಳು ಬಂಧಿಸಿದ್ದರು. ಈ ಹುಡುಗಿಯ ಬದಲಾಗಿ ಅವರನ್ನು ಮಕ್ಕದವರು ಸ್ವತಂತ್ರಗೊಳಿಸಿದರು.

(ಸೀರತ್ ಖಾತಮನ್ನಬೀಈನ್, ಪುಟ–716–717)

ಖೈಬರ್ ಯುದ್ಧದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಹಿಜರೀ 7 ಮುಹರ್ರಂ ತಿಂಗಳಲ್ಲಿ ಖೈಬರ್ ಕಡೆಗೆ ಹೋದರು. ಖೈಬರ್ ಎಂಬುದು ಒಂದು ಖರ್ಜೂರದ ತೋಟವಾಗಿದೆ. ಅದು ಮದೀನ ಮುನವ್ವರದಿಂದ 184 ಕಿ.ಮೀ. ಉತ್ತರ ದಿಕ್ಕಿನಲ್ಲಿ ಇದೆ. ಇಲ್ಲಿ ಜ್ವಾಲಾಮುಖಿ ಪರ್ವತಗಳ ಒಂದು ಸಾಲು ಇದೆ. ಇಲ್ಲಿ ಯಹೂದಿಯರ ಅನೇಕ ಕೋಟೆಗಳಿದ್ದುವು. ಅವುಗಳಲ್ಲಿ ಕೆಲವು ಕೋಟೆಗಳ ಅವಶಿಷ್ಟಗಳು ಈಗಲೂ ಬಾಕಿಯುಳಿದಿವೆ. ಈ ಕೋಟೆಗಳನ್ನು ಮುಸ್ಲಿಮರು ಖೈಬರ್ ಯುದ್ಧದಲ್ಲಿ ಜಯಿಸಿದುವು. ಈ ಪ್ರದೇಶ ಹಚ್ಚಹಸುರಾದ ಮತ್ತು ಯಹೂದಿಗಳ ಅತ್ಯಂತ ದೊಡ್ಡ ಕೇಂದ್ರವಾಗಿತ್ತು. ಹಝ್ರತ್ ಪೈಗಂಬರ್(ಸ) ಹೊರಟಾಗ ಮದೀನದಲ್ಲಿ ಸಬಾಹ್ ಬಿನ್ ಉರ್ಫ ಘಫಾರಿಯನ್ನು ಅವರು ಅಮೀರ್‌ರನ್ನಾಗಿ ಮಾಡಿದ್ದರು. (ತಾರೀಖ್ ಅತ್ತಬರಿ, ಸಂಪುಟ–3, ಪುಟ–144, ದಾರುಲ್ ಫಿಕರ್ ಬೈರೂತ್ 2002) (ಅಟ್ಲಸ್ ಸೀರತ್ ನಬವಿ, ಡಾ. ಶೌಖಿ ಅಬುಜಂದಲ್, ಪುಟ–330, ದಾರುಸ್ಸಲಾಮ್) (ಫರ್‌ಹಂಗ್ ಸೀರತ್, ಪುಟ–117, ಝುವಾರ ಅಕಾಡಮಿ ಕರಾಚಿ 2003)

ಖೈಬರ್‌ನಲ್ಲಿ 10ಕ್ಕಿಂತ ಹೆಚ್ಚು ರಾತ್ರಿಗಳು ಕೋಟೆಗಳ ಮುತ್ತಿಗೆ ಹಾಕಲಾಗಿತ್ತು. (ಅಲ್‌ಮವಾಹಿಬ್ ಲಿದ್ದುನಿಯ, ಸಂಪುಟ–1, ಪುಟ–517, ಗಝ್ವ ಎ ಖೈಬರ್ ಅಲ್‌ಮಕ್ತಬ ಅಲ್‌ಇಸ್ಲಾಮಿ 2004)

ಹಝ್ರತ್ ಬರೀದ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ತೀವ್ರವಾದ ತಲೆನೋವು ಆಗುತ್ತಿತ್ತು. ಆ ಕಾರಣದಿಂದ ಅವರು ಒಂದೆರಡು ದಿನಗಳು ಹೊರಗೆ ಬರುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಖೈಬರ್‌ಗೆ ತಲುಪಿದಾಗ ಅವರಿಗೆ ತೀವ್ರ ಮೈಗ್ರೇನ್ ಆಯಿತು. ಆದ್ದರಿಂದ ಅವರಿಗೆ ಹೊರಗೆ ಬರಲಾಗಲಿಲ್ಲ. ಎಂದರೆ, ಮೈಗ್ರೇನ್ ಎಂದು ಸಾಮಾನ್ಯವಾಗಿ ಹೇಳಲಾಗುವ ತಲೆನೋವು ಆಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಕತೀಬದ ಕೋಟೆಗಳ ಕಡೆಗೆ ಕಳುಹಿಸಿದರು. ಅವರು ಹಝ್ರತ್ ಪೈಗಂಬರ್(ಸ)ರ ಧ್ವಜವನ್ನು ಪಡೆದರು. ಶತ್ರುಗಳನ್ನು ಧೈರ್ಯದಿಂದ ಎದುರಿಸಿದರು. ತೀವ್ರವಾದ ಯುದ್ಧ ನಡೆಯಿತು. ಆದರೆ ಬಹಳ ಪ್ರಯತ್ನ ಮಾಡಿದ್ದರೂ ವಿಜಯ ಸಾಧಿಸಲಾಗಲಿಲ್ಲ. ಅನಂತರ ಅವರು ಮರಳಿ ಬಂದರು. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರನ್ನು ಕಳುಹಿಸಿದರು. ಅವರು ಸಹ ಧ್ವಜವನ್ನು ಪಡೆದರು. ತೀವ್ರವಾದ ಯುದ್ಧ ನಡೆಯಿತು. ಅದು ಮೊದಲ ಯುದ್ಧಕ್ಕಿಂತ ಕಠಿಣವಾಗಿತ್ತು. ಅವರು ಕೂಡ ಮರಳಿ ಬಂದರು. ಆದರೆ ವಿಜಯ ಸಾಧಿಸಲಾಗಲಿಲ್ಲ. (ಸಬ್ಲುಲ್ ಹುದಾ ವರ್‍ರಶಾದ್, ಭಾಗ–5, ಪುಟ–124, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಒಬ್ಬರ ನಂತರ ಇನ್ನೊಬ್ಬರಂತೆ ಸೇನಾಧಿಪತಿಗಳನ್ನಾಗಿ ನಿಶ್ಚಯಿಸಲಾಗಿತ್ತು. ಆದಾಗ್ಯೂ ಕೋಟೆಯ ಮೇಲೆ ವಿಜಯ ಸಾಧಿಸಲಿಲ್ಲವೆಂದೇ ಚರಿತ್ರೆಯ ಅನೇಕ ಪುಸ್ತಕಗಳಲ್ಲಿ ಬರೆದಿದೆ. ಆದರೆ ಲಾಹೋರಿನಿಂದ 2010 ಫೆಬ್ರವರಿಯಲ್ಲಿ ಪ್ರಕಾಶನಗೊಂಡ ಸಯ್ಯಿದುನಾ ಸಿದ್ದೀಖ್ ಅಕ್ಬರ್ ಎಂಬ ಒಂದು ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ: ಒಂದು ಕೋಟೆಯ ಮೇಲೆ ವಿಜಯ ಸಾಧಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ)ರನ್ನು ಸೇನಾಧಿಪತಿಯನ್ನಾಗಿ ನಿಶ್ಚಯಿಸಲಾಯಿತು. ಅದು ಅವರ ಕೈಗಳಿಂದ ಜಯಿಸಿತು. ಮತ್ತೊಂದು ಕೋಟೆಯ ಮೇಲೆ ಹಝ್ರತ್ ಉಮರ್‌ರನ್ನು(ರ) ನಿಶ್ಚಯಿಸಲಾಯಿತು. ಅವರು ಸಹ ಜಯ ಸಾಧಿಸಿದರು. ಮೂರನೇ ಕೋಟೆಯನ್ನು ಜಯಿಸಿ ಬರುವ ಜವಾಬ್ದಾರಿ ಮುಹಮ್ಮದ್ ಬಿನ್ ಮಸ್ಲಮರಿಗೆ ಒಪ್ಪಿಸಲಾಗಿತ್ತು. ಆದರೆ ಅವರು ಅದನ್ನು ಜಯಿಸಲಾಗಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನನ್ನು ಮತ್ತು ಅವರ ಪ್ರವಾದಿಯನ್ನು ಬಹಳ ಪ್ರೀತಿಸುವ ಒಬ್ಬ ವ್ಯಕ್ತಿಯನ್ನು ನಾಳೆ ನಾನು ಸೇನಾಧಿಪತಿಯನ್ನಾಗಿ ಮಾಡಿ ಕಳುಹಿಸುವೆನು. ಅವರ ಕೈಗಳಿಂದ ಕೋಟೆ ಜಯಿಸಲಾಗುವುದು. ಹೀಗೆ ಧ್ವಜವನ್ನು ಹಝ್ರತ್ ಅಲಿ(ರ)ಗೆ ನೀಡಲಾಯಿತು. ಹೀಗೆ ಖಮೂಸ್ ಕೋಟೆಯ ಮೇಲೆ ಜಯ ಸಾಧಿಸಲಾಯಿತು. (ಸಯ್ಯಿದುನಾ ಸಿದ್ದೀಖೆ ಅಕ್ಬರ್, ಪುಟ–49, ಅಲ್‌ಹಾಜ್ ಹಕೀಮ್ ಗುಲಾಮ್ ನಬಿ. ಎಂ.ಎ)

ಖೈಬರ್ ಯುದ್ಧದ ಕುರಿತು ವಾಖಿದಿಯ ಪ್ರಸ್ತಾಪವು ಇದೆ. ಜನರು ಅವರ ಚರಿತ್ರಗ್ರಂಥವನ್ನು ಸಹ ಓದುತ್ತಾರೆ. ಆದ್ದರಿಂದ ಅದನ್ನು ಸಹ ಓದಿಹೇಳುತ್ತೇನೆ. ಆದರೆ ಇದು ಶೇಕಡ ನೂರರಷ್ಟು ಸರಿಯೆಂದು ಹೇಳುವಂತಿಲ್ಲ. ಹೇಗಿದ್ದರೂ ಅವರು ಬರೆಯುತ್ತಾರೆ: ಖೈಬರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಒಬ್ಬ ಸಹಾಬಿಯಾದ ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್ ಹೇಳಿದರು: ಯಾ ರಸೂಲಲ್ಲಾಹ್, ಯಹೂದಿಯರು ಖರ್ಜೂರದ ಮರಗಳನ್ನು ತಮ್ಮ ಯುವ ಮಕ್ಕಳಿಗಿಂತ ಹೆಚ್ಚು ಪ್ರೀತಿಸುತ್ತಾರೆ. ಆದ್ದರಿಂದ ನೀವು ಅವರ ಖರ್ಜೂರದ ಮರಗಳನ್ನು ಕಡಿಯಿರಿ. ಹೀಗೆ ಹಝ್ರತ್ ಪೈಗಂಬರ್(ಸ) ಖರ್ಜೂರದ ಮರಗಳನ್ನು ಕಡಿಯಲು ಆಜ್ಞಾಪಿಸಿದರು. ಮುಸ್ಲಿಮರು ಬೇಗನೇ ಖರ್ಜೂರದ ಮರಗಳನ್ನು ಕಡಿಯಲು ಶುರುಮಾಡಿದರು. ಇಷ್ಟರ ತನಕದ ಪ್ರಸ್ತಾಪ ಶೇಕಡ ನೂರರಷ್ಟು ಸರಿಯೆಂದು ತೋರುವುದಿಲ್ಲ. ಆದರೆ ಮುಂದಿನ ಭಾಗ ಸರಿಯೆಂದು ತೋರುತ್ತದೆ. ಅವರು ಬರೆಯುತ್ತಾರೆ: ಆಗ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ಅಲ್ಲಾಹನು ಖೈಬರ್ ವಿಜಯದ ವಾಗ್ದಾನವನ್ನು ನೀಡಿರುವನು. ಅವನು ನಿಮ್ಮೊಂದಿಗೆ ಮಾಡಿರುವ ತನ್ನ ವಾಗ್ದಾನವನ್ನು ಈಡೇರಿಸುವವನಾಗಿದ್ದಾನೆ. ನೀವು ಖರ್ಜೂರದ ಮರಗಳನ್ನು ಕಡಿಯಬೇಡಿರಿ. ಆಗ ಹಝ್ರತ್ ಪೈಗಂಬರ್(ಸ) ಖರ್ಜೂರದ ಮರಗಳನ್ನು ಕಡಿಯದಿರಲು ಘೋಷಣೆ ಮೂಲಕ ಆಜ್ಞಾಪಿಸಿದರು. (ಕಿತಾಬುಲ್ ಮಗಾಝಿ ಲಿಲ್ ವಾಖಿದಿ, ಸಂಪುಟ–2, ಪುಟ–120, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಖೈಬರ್‌ನಲ್ಲಿ ವಿಜಯ ದಯಪಾಲಿಸಿದಾಗ ಹಝ್ರತ್ ಪೈಗಂಬರ್(ಸ) ಖೈಬರಿನ ಒಂದು ವಿಶಿಷ್ಟ ಕಣಿವೆಯಾದ ಕತೀಬವನ್ನು ತನ್ನ ನಿಕಟ ಸಂಬಂಧಿಗಳಿಗೆ ಮತ್ತು ತನ್ನ ಕುಟುಂಬದ ಮಹಿಳೆಯರಿಗೆ ಮತ್ತು ಮುಸ್ಲಿಮರಾದ ಪುರುಷರಿಗೆ ಮತ್ತು ಮಹಿಳೆಯರಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಇತರ ಸಂಬಂಧಿಕರಲ್ಲದೇ ಹಝ್ರತ್ ಅಬೂಬಕರ್(ರ)ರಿಗೂ ನೂರು ವಸಕ್ ಧಾನ್ಯ ಮತ್ತು ಖರ್ಜೂರಗಳನ್ನು ನೀಡಿದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–707, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಒಂದು ವಸಕ್ ಎಂದರೆ 60 ಸಾಅ್ ಆಗಿದೆ. ಒಂದು ಸಾಅ್ ಎಂದರೆ ಎರಡುವರೆ ಕಿಲೊ ಆಗಿದೆ. (ಲುಗಾತುಲ್ ಹದೀಸ್, ಸಂಪುಟ–4, ಪುಟ–487, ಮತ್ತು ಸಂಪುಟ–2, ಪುಟ–648) ಹೀಗೆ ಸುಮಾರು 15 ಸಾವಿರ ಕಿಲೋ ಧಾನ್ಯ ಮತ್ತು ಖರ್ಜೂರಗಳು ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿತು.

ನಜದಿನ ಕಡೆಗೆ ಹಝ್ರತ್ ಅಬೂಬಕರ್(ರ)ರ ದಂಡಯಾತ್ರೆ. ಈ ಕುರಿತು ಹೀಗೆ ಬರೆಯಲಾಗಿದೆ: ನಜದ್ ಎಂಬುದು ಅರ್ಧ ಮರುಭೂಮಿಯೂ ಬಾಕಿ ಅರ್ಧ ಹಚ್ಚ ಹಸುರಾಗಿಯೂ ಇರುವ ಒಂದು ಪ್ರದೇಶವಾಗಿದೆ. ಅದರಲ್ಲಿ ಅನೇಕ ಕಣಿವೆಗಳು ಮತ್ತು ಪರ್ವತಗಳು ಇವೆ. ಇದು ದಕ್ಷಿಣದಲ್ಲಿ ಯಮನ್ ತನಕ ಮತ್ತು ಉತ್ತರದಲ್ಲಿ ಸಿರಿಯ ಮತ್ತು ಇರಾಕ್ ತನಕ ತಲುಪುತ್ತದೆ. ಅದರ ಪಶ್ಚಿಮದಲ್ಲಿ ಹಿಜಾಜಿನ ಮರುಭೂಮಿಯಿದೆ. ಈ ಪ್ರದೇಶ ಸಮುದ್ರ ಮಟ್ಟದಿಂದ 1200 ಮೀಟರ್ ಎತ್ತರದಲ್ಲಿದೆ. ಈ ಎತ್ತರದ ಕಾರಣದಿಂದಲೇ ಇದನ್ನು ನಜದ್ ಎಂದು ಹೇಳಲಾಗುತ್ತದೆ. (ಫರ್‌ಹಂಗ್ ಸೀರತ್, ಪುಟ–297, ಝುವಾರ ಅಕಾಡಮಿ ಕರಾಚಿ 2003)

ನಜದಿನಲ್ಲಿ ಬನೂ ಕಲಾಬ್ ಮುಸ್ಲಿಮರ ವಿರುದ್ಧ ಒಟ್ಟುಗೂಡಿದರು. ಆಗ ಅವರನ್ನು ದಮನಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಅಲ್ಲಿಗೆ ಕಳುಹಿಸಿದರು. ಈ ದಂಡಯಾತ್ರೆ ಹಿಜರೀ 7, ಶಾಬಾನ್ ತಿಂಗಳಲ್ಲಿ ನಡೆದಿತ್ತು. ಹಝ್ರತ್ ಸಲ್ಮಾ ಬಿನ್ ಅಕೂಅ್‌ರಿಂದ ಹೀಗೆ ವರದಿಯಾಗಿದೆ; ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರನ್ನು(ರ) ಕಳುಹಿಸಿದರು. ನಮ್ಮ ಮೇಲೆ ಅವರನ್ನು ಅಮೀರನ್ನಾಗಿ ಮಾಡಿದರು.
(ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–6, ಪುಟ–131, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹುದೈಬಿಯ ಸಂಧಿಯ ನಂತರ ಅಬುಸುಫ್‌ಯಾನ್ ಮಕ್ಕಕ್ಕೆ ಬಂದನು. ಇದರ ಕುರಿತು ಹೀಗೆ ಬರೆಯಲಾಗಿದೆ: ಹುದೈಬಿಯ ಒಪ್ಪಂದಕ್ಕೆ ವಿರುದ್ಧವಾಗಿ ಖುರೈಶಿಗಳ ಮಿತ್ರಗೋತ್ರವಾದ ಬನೂ ಬಕರ್ ಮುಸ್ಲಿಮರ ಮಿತ್ರಗೋತ್ರವಾದ ಬನೂಖುಝಾಅದ ಮೇಲೆ ದಾಳಿ ನಡೆಸಿತು. ಖುರೈಶಿಗಳು ಆಯುಧಗಳು ಮತ್ತು ಸವಾರಿಗಳೊಂದಿಗೆ ಬನೂಬಕರ್ ಗೋತ್ರಕ್ಕೆ ನೆರವು ನೀಡಿದರು. ಅವರು ಹುದೈಬಿಯದ ಶರತ್ತುಗಳ ಪರಿವೆ ಮಾಡಲಿಲ್ಲ. ಬಹಳ ಅಹಂಭಾವ ಮತ್ತು ಅಹಂಕಾರದಿಂದ ಹೀಗೆ ಹೇಳಿದರು: ನಾವು ಯಾವುದೇ ಒಪ್ಪಂದವನ್ನು ಪಾಲಿಸುವುದಿಲ್ಲ. ಆಗ ಅಬುಸುಫ್‌ಯಾನ್ ಮದೀನಕ್ಕೆ ಬಂದು ಹುದೈಬಿಯದ ಒಪ್ಪಂದವನ್ನು ನವೀಕರಿಸಲು ಬೇಡಿಕೊಂಡನು. ಎಂದರೆ ಪುನಃ ಒಪ್ಪಂದವನ್ನು ಮಾಡಿಕೊಳ್ಳಲು ವಿನಂತಿಸಿದನು. ಅವನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದನು. ಆದರೆ ಹಝ್ರತ್ ಪೈಗಂಬರ್(ಸ) ಅವನ ಯಾವುದೇ ಮಾತಿಗೆ ಉತ್ತರ ಕೊಡಲಿಲ್ಲ. ಅನಂತರ ಅವನು ಅಬೂಬಕರ್‌ರ(ರ) ಬಳಿಗೆ ಹೋದನು. ಹಝ್ರತ್ ಪೈಗಂಬರ್(ಸ)ರೊಡನೆ ಅವರು ಮಾತನಾಡಬೇಕೆಂದು ಹೇಳಿದನು. ನಾನು ಮಾತನಾಡುವುದಿಲ್ಲವೆಂದು ಹಝ್ರತ್ ಅಬೂಬಕರ್(ರ) ಹೇಳಿದರು. ಅನಂತರ ಅವನು ಹಝ್ರತ್ ಉಮರ್‌ರ(ರ) ಬಳಿಗೆ ಹೋದನು. ಅವರು ಸಹ ನಿರಾಕರಿಸಿದರು. ಹೇಗಿದ್ದರೂ ಅವನು ವಿಫಲನಾಗಿ ಮರಳಿ ಹೋದನು.

(ಸೀರತ್ ಇಬ್ನೆ ಹಿಶ್ಶಾಮ್, ಪುಟ–734–735, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಶರಹ್ ಝುರ್‌ಖಾನಿ, ಸಂಪುಟ–3, ಪುಟ–379–380, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

**ಮಕ್ಕಾ ವಿಜಯ:** ಈ ಯುದ್ಧವನ್ನು ಅಲ್‌ಫತ್‌ಹುಲ್ ಅಝೀಂ ಎಂದೂ ಕರೆಯಲಾಗುತ್ತದೆ. ಮಕ್ಕಾ ವಿಜಯದ ಯುದ್ಧ ಹಿಜರೀ 8, ರಮಝಾನ್ ತಿಂಗಳಲ್ಲಿ ನಡೆದಿತ್ತು. ತಾರೀಖ್ ತಬರಿಯಲ್ಲಿ ಹೀಗೆ ವಿವರಿಸಲಾಗಿದೆ: ಯಾತ್ರೆಯ ತಯಾರಿ ಮಾಡಲು ಹಝ್ರತ್ ಪೈಗಂಬರ್(ಸ) ಜನರೊಡನೆ ಹೇಳಿದರು. ನನ್ನ ಸಾಮಾನುಗಳನ್ನು ಸಹ ತಯಾರಿ ಮಾಡಿಡು ಎಂದು ಹಝ್ರತ್ ಪೈಗಂಬರ್(ಸ) ತನ್ನ ಮನೆಯವರೊಡನೆ ಹೇಳಿದರು. ಹಝ್ರತ್ ಅಬೂಬಕರ್(ರ) ತನ್ನ ಮಗಳಾದ ಹಝ್ರತ್ ಆಯಿಶ(ರ)ರ ಮನೆಗೆ ಹೋದರು. ಆ ಸಮಯದಲ್ಲಿ ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ಸಾಮಾನುಗಳ ತಯಾರಿ ಮಾಡುತ್ತಿದ್ದರು. ಹಝ್ರತ್ ಅಬೂಬಕರ್(ರ) ಕೇಳಿದರು: ಹೇ ನನ್ನ ಪುತ್ರೀ, ಹಝ್ರತ್ ಪೈಗಂಬರ್(ಸ)ರ ಸಾಮಾನುಗಳನ್ನು ತಯಾರು ಮಾಡಿಡಲು ಅವರು ನಿನ್ನೊಡನೆ ಹೇಳಿರುವರೇ? ಹೌದೆಂದು ಅವರು ಹೇಳಿದರು. ಹಝ್ರತ್ ಅಬೂಬಕರ್(ರ) ಕೇಳಿದರು: ಹಝ್ರತ್ ಪೈಗಂಬರ್(ಸ) ಎಲ್ಲಿಗೆ ಹೋಗಲು ಉದ್ದೇಶಿಸಿರುವರು ಎಂದು ನಿನಗೆ ಅನಿಸುತ್ತಿದೆ?. ಹಝ್ರತ್ ಆಯಿಶ(ರ) ಹೇಳಿದರು: ನನಗೆ ತೀರಾ ಗೊತ್ತಿಲ್ಲ. ಅನಂತರ ಮಕ್ಕದ ಕಡೆಗೆ ಹೋಗುತ್ತಿದ್ದೇವೆ ಎಂದು ಹಝ್ರತ್ ಪೈಗಂಬರ್(ಸ) ಜನರೊಡನೆ ಹೇಳಿದರು. ಬೇಗನೇ ಅದರ ಏರ್ಪಾಡು ಮಾಡಲು ಮತ್ತು ಅದರ ತಯಾರಿ ಮಾಡಲು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸಿದರು. ಆಗ ಜನರು ಹೋಗಲು ತಯಾರಿ ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಾವು ಖುರೈಶಿಗಳ ಪ್ರದೇಶಗಳಿಗೆ ಅಚಾನಕ್ಕಾಗಿ ತಲುಪುವ ವರೆಗೆ ಖುರೈಶಿಗಳ ದೂತರನ್ನು ಮತ್ತು ಗೂಢಚರರನ್ನು ತಡೆದು ನಿಲ್ಲಿಸು. (ತಾರೀಖ್ ಅತ್ತಿಬರಿ ಲಿಅಬಿ ಜಅ್‌ಫರ್ ಮುಹಮ್ಮದ್ ಬಿನ್ ಜರೀರ್ ತಬರಿ, ಸಂಪುಟ–3, ಪುಟ–166, ದಾರುಲ್ ಫಿಕರ್ ಬೈರೂತ್ 2002)

ಈ ಘಟನೆಯನ್ನು ಇನ್ನೂ ವಿವರಿಸುತ್ತಾ ಸೀರತ್ ಹಲಬಿಯದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ಹಝ್ರತ್ ಆಯಿಶ(ರ)ರೊಡನೆ ಕೇಳುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಬಂದರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು: ಯಾ ರಸೂಲುಲ್ಲಾಹ್ ನೀವು ಯಾತ್ರೆ ಮಾಡಲು ಉದ್ದೇಶಿಸಿರುವಿರಾ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಾಗಾದರೆ ನಾನೂ ತಯಾರಿ ಮಾಡಲೇ ಎಂದು ಹಝ್ರತ್ ಅಬೂಬಕರ್(ರ) ಕೇಳಿದರು. ಸರಿಯೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಎಲ್ಲಿಗೆ ಹೋಗಲು ಉದ್ದೇಶಿರುವಿರಿ ಎಂದು ಹಝ್ರತ್ ಅಬೂಬಕರ್(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಖುರೈಶಿಗಳನ್ನು ಎದುರಿಸಲು. ಆದರೆ ಹೇ ಅಬೂಬಕರ್, ಇದನ್ನು ಈಗ ರಹಸ್ಯವಾಗಿರಿಸು. ಒಟ್ಟಿನಲ್ಲಿ, ಹಝ್ರತ್ ಪೈಗಂಬರ್(ಸ) ಜನರೊಡನೆ ತಯಾರಿ ಮಾಡಲು ಆಜ್ಞಾಪಿಸಿದರು. ಆದರೆ ಎಲ್ಲಿಗೆ ಹೋಗುತ್ತಿದ್ದಾರೆ ಎಂಬುದನ್ನು ಜನರೊಡನೆ ಹೇಳಲಿಲ್ಲ. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು: ಯಾ ರಸೂಲಲ್ಲಾಹ್, ಖುರೈಶ್ ಮತ್ತು ನಮ್ಮ ನಡುವೆ ಒಪ್ಪಂದ ಮತ್ತು ಸಂಧಿಯ ಕಾಲಾವಧಿ ಬಾಕಿಯಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಆದರೆ ಅವರು ಮೋಸ ಮಾಡಿರುವರು ಮತ್ತು ಒಪ್ಪಂದವನ್ನು ಮುರಿದಿರುವರು. ಆದರೆ ನಾನು ನಿಮ್ಮೊಡನೆ ಹೇಳಿದ್ದನ್ನು ರಹಸ್ಯವಾಗಿಯೇ ಇರಿಸು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಬೂಬಕರ್(ರ) ಕೇಳಿದರು: ಯಾ ರಸೂಲಲ್ಲಾಹ್, ನೀವು ಯಾವುದಾದರೂ ಯಾತ್ರೆ ಮಾಡಲು ಉದ್ದೇಶಿಸಿದ್ದೀರಾ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಬಹುಶಃ ನೀವು ಬನೂ ಅಸ್‌ಫರ್, ಎಂದರೆ ರೋಮನ್ನರ ಕಡೆಗೆ ಹೋಗಲು ನಿರ್ಧರಿಸಿದ್ದೀರಿ ಎಂದು ತೋರುತ್ತದೆ. ಅಲ್ಲವೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಹಾಗಾದರೆ, ನಜದಿನ ಕಡೆಗೆ ಹೊರಡಲು ಉದ್ದೇಶಿಸಿದ್ದೀರಾ? ಅಲ್ಲವೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಹಾಗಾದರೆ ಖುರೈಶಿನ ಕಡೆಗೆ ಹೋಗುತ್ತಿದ್ದೀರಾ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮ ಮತ್ತು ಅವರ ನಡುವೆ ಈಗ ಒಪ್ಪಂದದ ಕಾಲಾವಧಿ ಬಾಕಿಯುಳಿದಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು ಬನೂ ಕಅ್‌ಬ್ ಎಂದರೆ ಬನೂ ಖುಝಾಅರೊಂದಿಗೆ ಏನು ಮಾಡಿದರು ಎಂದು ನಿಮಗೆ ಗೊತ್ತಿಲ್ಲವೇ? ಅನಂತರ ಹಝ್ರತ್ ಪೈಗಂಬರ್(ಸ) ಗ್ರಾಮಗಳ ಮತ್ತು ಆಸುಪಾಸಿನ ಮುಸ್ಲಿಮರಿಗೆ ಸಂದೇಶಗಳನ್ನು ಕಳುಹಿಸಿದರು ಮತ್ತು ಹೀಗೆ ಹೇಳಿದರು: ಅಲ್ಲಾಹನನ್ನು ಮತ್ತು ಖಿಯಾಮತ್ ದಿನವನ್ನು ನಂಬುವ ಪ್ರತಿಯೊಬ್ಬ ವ್ಯಕ್ತಿ ರಮಝಾನಿನ ಆರಂಭದ ದಿನಗಳಲ್ಲಿ ಮದೀನಕ್ಕೆ ಬಂದು ಸೇರಬೇಕು. ಹೀಗೆ ಹಝ್ರತ್ ಪೈಗಂಬರ್(ಸ)ರ ಘೋಷಣೆಯ ಪ್ರಕಾರ ಅರೇಬಿಯರು ಮದೀನಕ್ಕೆ ಬರಲು ಶುರುವಾದರು. ಮದೀನಕ್ಕೆ ಬಂದ ಗೋತ್ರಗಳಲ್ಲಿ ಬನೂ ಸಲಾಮ್, ಬನೂ ಗ಼ಫ್ಫಾರ್, ಬನೂ ಮಝೀನ, ಬನೂ ಅಶ್‌ಜಅ್ ಮತ್ತು ಬನೂ ಜಹೀನ ಇದ್ದುವು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಾವು ಖುರೈಶಿಗಳ ಪ್ರದೇಶಗಳಿಗೆ ಅಚಾನಕ್ಕಾಗಿ ತಲುಪುವ ವರೆಗೆ ಖುರೈಶಿಗಳ ದೂತರನ್ನು ಮತ್ತು ಗೂಢಚರರನ್ನು ತಡೆದು ನಿಲ್ಲಿಸು. ಹೋಗುವ ಬರುವ ಪ್ರತಿಯೊಬ್ಬರ ಬಗ್ಗೆ ತಿಳಿಯುವಂತಾಗಲು ಹಝ್ರತ್ ಪೈಗಂಬರ್(ಸ) ಎಲ್ಲ ರಸ್ತೆಗಳಲ್ಲಿ ಮೇಲ್ನೋಟವಹಿಸುವ ಸಂಘಗಳನ್ನು ಇರಿಸಿದ್ದರು. ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ಖುರೈಶಿಗಳಿಗೆ ಮುಸ್ಲಿಮರ ತಯಾರಿಯ ಕುರಿತು ಗೊತ್ತಾಗದಿರಲಿಕ್ಕಾಗಿ ಅಪರಿಚಿತರಾದ ಯಾರಾದರೂ ನಿಮ್ಮ ಬಳಿಯಿಂದ ದಾಟಿ ಹೋದರೆ ಅವರನ್ನು ತಡೆದು ನಿಲ್ಲಿಸಬೇಕು. (ಅಸ್ಸೀರತುಲ್ ಹಲಬೀಯ್ಯ, ಸಂಪುಟ–3, ಪುಟ–107–108, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ಒಬ್ಬಳು ಪತ್ನಿಯೊಡನೆ ಹೇಳಿದರು: ನನ್ನ ಯಾತ್ರೆಯ ಸಾಮಾನುಗಳನ್ನು ತಯಾರು ಮಾಡಿಡಲು ಆರಂಭಿಸು. ಅವರು ಯಾತ್ರೆಯ ಸಾಮಾನುಗಳನ್ನು ಕಟ್ಟಿಡಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಆಯಿಶರೊಡನೆ(ರ) ಹೇಳಿದರು: ನನಗೆ ಧಾನ್ಯಗಳನ್ನು ಹುರಿದು ಪುಡಿ ಮಾಡಿ ತಯಾರು ಮಾಡಿಡು. ಇದೇ ತರಹದ ಆಹಾರಗಳು ಆ ಕಾಲಗಳಲ್ಲಿ ಇರುತ್ತಿದ್ದುವು. ಹೀಗೆ ಅವರು ಧಾನ್ಯಗಳಿಂದ ಕಲ್ಲುಗಳನ್ನು ಹೆಕ್ಕಿ ಬೇರ್ಪಡಿಸಲು ಶುರುಮಾಡಿದರು. ಹಝ್ರತ್ ಅಬೂಬಕ್ರ್(ರ) ಮಗಳನ್ನು ಭೇಟಿಯಾಗಲು ಮನೆಗೆ ಬಂದರು. ಈ ತಯಾರಿಯನ್ನು ಕಂಡು ಹಝ್ರತ್ ಅಬೂಬಕರ್(ರ) ಹಝ್ರತ್ ಆಯಿಶರೊಡನೆ(ರ) ಕೇಳಿದರು: ಇದೇನಾಗುತ್ತಿದೆ? ಹಝ್ರತ್ ಪೈಗಂಬರ್(ಸ) ಯಾವುದಾದರೂ ಯಾತ್ರೆಯ ತಯಾರಿಯಲ್ಲಿ ಇದ್ದಾರೆಯೇ?. ಹಝ್ರತ್ ಆಯಿಶ(ರ) ಹೇಳಿದರು: ಯಾವುದೋ ಯಾತ್ರೆಯ ತಯಾರಿಯೆಂದು ತೋರುತ್ತದೆ. ಯಾತ್ರೆಯ ತಯಾರಿಗಾಗಿ ಹಝ್ರತ್ ಪೈಗಂಬರ್(ಸ) ಹೇಳಿರುವರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಯಾವುದೋ ಯುದ್ಧದ ಉದ್ದೇಶವಿರಬೇಕು. ಹಝ್ರತ್ ಆಯಿಶ(ರ) ಹೇಳಿದರು: ನನಗಂತು ಸರಿಯಾಗಿ ಗೊತ್ತಿಲ್ಲ. ಯಾತ್ರೆಯ ಸಾಮಾನುಗಳನ್ನು ತಯಾರಿ ಮಾಡಲು ಹೇಳಿದ್ದರು ನಾವು ಅದರ ತಯಾರಿ ನಡೆಸುತ್ತಿದ್ದೇವೆ. ಎರಡು ಮೂರು ದಿನಗಳ ನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕ್ರ್(ರ) ಮತ್ತು ಹಝ್ರತ್ ಉಮರ್‌ರನ್ನು(ರ) ಕರೆದರು ಮತ್ತು ಹೀಗೆ ಹೇಳಿದರು: ನೋಡಿರಿ, ಖುಝಾಅದ ಜನರು ಬಂದದ್ದು ನಿಮಗೆ ಗೊತ್ತಿದೆ. ಈಗ ಇಂತಿಂತಿಹ ಘಟನೆಯಾಗಿದೆ. ಈ ಘಟನೆಗಿಂತ ಮುಂಚಿತವಾಗಿ ನನಗೆ ಅಲ್ಲಾಹನು ತಿಳಿಸಿಕೊಟ್ಟಿದ್ದನು. ಮಕ್ಕದವರು ಮೋಸಮಾಡಿರುವರು. ನಾವು ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೆವು. ಈಗ ನಾವು ಅವರನ್ನು ಹೆದರುವುದು ಮತ್ತು ಮಕ್ಕಾನಿವಾಸಿಗಳ ಧೈರ್ಯ ಮತ್ತು ಶಕ್ತಿಯನ್ನು ನೋಡಿ ಅವರನ್ನು ಎದುರಿಸಲು ತಯಾರಾಗದೇ ಇರುವುದು ಸತ್ಯವಿಶ್ವಾಸಕ್ಕೆ ವಿರುದ್ಧವಾದ ಸಂಗತಿಯಾಗಿದೆ. ನಾವು ಅಲ್ಲಿಗೆ ಹೋಗಬೇಕಾಗಿದೆ ಮತ್ತು ಇದರ ಬಗ್ಗೆ ನಿಮ್ಮಿಬ್ಬರ ಅಭಿಪ್ರಾಯವೇನು? ಹಝ್ರತ್ ಅಬೂಬಕರ್(ರ) ಹೇಳಿದರು: ನೀವಂತು ಅವರೊಡನೆ ಒಪ್ಪಂದ ಮಾಡಿಕೊಂಡಿರುವಿರಿ. ಮಾತ್ರವಲ್ಲ ಅದು ನಿಮ್ಮದೇ ಸಮುದಾಯವಾಗಿದೆ. ಎಂದರೆ ನೀವು ನಿಮ್ಮ ಕೋಮನ್ನೇ ಕೊಲ್ಲುವಿರಾ? ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ನಮ್ಮ ಸಮುದಾಯವನ್ನು ಕೊಲ್ಲುವುದಿಲ್ಲ. ಒಪ್ಪಂದ ಮುರಿದವರನ್ನು ಕೊಲ್ಲುವೆವು. ಅನಂತರ ಹಝ್ರತ್ ಉಮರ್‌ರೊಡನೆ(ರ) ಅಭಿಪ್ರಾಯವನ್ನು ಕೇಳಿದರು. ಅವರು ಹೇಳಿದರು: ಬಿಸ್ಮಿಲ್ಲಾಹ್, ಅಲ್ಲಾಹನ ಹೆಸರಲ್ಲಿ, ಇಂತಹ ಒಂದು ದಿನ ಬರಲಿ ಎಂದು ನಾನಂತು ಬಹಳವಾಗಿ ಪ್ರಾರ್ಥಿಸುತ್ತಿದ್ದೆ.

*(ಪುಟ 12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನೀವು ಮೂರು ಸಾವಿರ ಬಿಲ್ಲುಗಾರರಾಗಿದ್ದರೂ ಮೂವತ್ತು ಸಾವಿರ ಬಿಲ್ಲುಗಾರರಾಗಿದ್ದರೂ ನನಗೆ ಅದರ ಪರಿವೆಯಿಲ್ಲ. ಆದರೆ ಎಲೈ ಬಹುದೇವಾರಾಧಕರೇ, ನನ್ನ ಈ ಧೈರ್ಯವನ್ನು ನೋಡಿಕೊಂಡು ನನ್ನನ್ನು ದೇವನೆಂದು ಭಾವಿಸಬೇಡಿರಿ. ನಾನೊಬ್ಬ ಮನುಷ್ಯನಾಗಿರುವೆನು. ನಿಮ್ಮ ಸರದಾರ ಅಬ್ದುಲ್ ಮುತಲ್ಲಿಬರ ಮೊಮ್ಮಗನಾಗಿರುವೆನು.**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹುನೈನ್ ಯುದ್ಧ, ತಾಇಫ್ ಯುದ್ಧ ಹಾಗೂ ತಬೂಕ್ ಯುದ್ಧದ ಕುರಿತು ವಿವರಾತ್ಮಕ ಪ್ರಸ್ತಾವನೆ**

**ಹಝ್ರತ್ ಅಬೂಬಕರ್(ರ) ತಬೂಕ್ ಯುದ್ಧದ ವೇಳೆ ತನ್ನ ಸಂಪೂರ್ಣ ಸಂಪತ್ತು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಸಮರ್ಪಿಸಿದ್ದರು. ಅದರ ಒಟ್ಟು ಬೆಲೆ 4 ಸಾವಿರ ದಿರ್ಹಂ ಆಗಿತ್ತು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–02–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಚರಿತ್ರೆಯಲ್ಲಿ ಮಕ್ಕಾ ವಿಜಯಕ್ಕೆ ಸಂಬಂಧಿಸಿ ಹಝ್ರತ್ ಅಬೂಬಕರ್(ರ)ರ ಒಂದು ಕನಸಿನ ಪ್ರಸ್ತಾಪ ಸಿಗುತ್ತದೆ. ಅದೇನೆಂದರೆ, ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಬಂದು ತನ್ನ ಕನಸನ್ನು ವಿವರಿಸುತ್ತಾ ಹೇಳಿದರು: ಯಾ ರಸೂಲಲ್ಲಾಹ್, ನಾನೊಂದು ಕನಸನ್ನು ಕಂಡಿದ್ದೇನೆ. ನಾನು ಕನಸಿನಲ್ಲಿ ಹೀಗೆ ಕಂಡೆನು: ನಾವು ಮಕ್ಕದ ಸಮೀಪಕ್ಕೆ ತಲುಪಿದ್ದೇವೆ. ಆಗೊಂದು ನಾಯಿ ಬೊಗಳುತ್ತಾ ನಮ್ಮ ಕಡೆಗೆ ಬರುತ್ತದೆ. ನಾವು ಅದರ ಸಮೀಪಕ್ಕೆ ತಲುಪಿದಾಗ ಅದು ಅಂಗಾತ ಮಲಗಿತು. ಅದರಿಂದ ಹಾಲು ಹರಿಯಲು ತೊಡಗಿತು. ಈ ಕನಸನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ, ಎಂದರೆ ಮಕ್ಕಾ ನಿವಾಸಿಗಳ ಉಪದ್ರ ದೂರವಾಯಿತು ಮತ್ತು ಪ್ರಯೋಜನ ಸಮೀಪವಾಯಿತು. ಅವರು ನಿಮ್ಮ ನಿಕಟ ಸಂಬಂಧದ ಹೆಸರಲ್ಲಿ ನಿಮ್ಮ ಅಭಯದಲ್ಲಿ ಬರುವರು. ನೀವು ಅವರಲ್ಲಿ ಕೆಲವರನ್ನು ಭೇಟಿಯಾಗುವಿರಿ. ನೀವು ಅಬುಸುಫ್‌ಯಾನನ್ನು ಭೇಟಿಯಾದರೆ ಅವರನ್ನು ಕೊಲ್ಲಬೇಡಿರಿ.

ಅನಂತರ ಮುಸ್ಲಿಮರು ಅಬುಸುಫ್‌ಯಾನ್ ಮತ್ತು ಹಕೀಂ ಬಿನ್ ಹಝಾಮ್‌ರನ್ನು ಮರುಝ್ಝಹ್‌ರಾನ್ ಎಂಬ ಪ್ರದೇಶದಲ್ಲಿ ಭೇಟಿಯಾದರು.
(ದಲಾಎಲುನ್ನಬುವ್ವ ಲಿಲ್ ಬೈಹಖಿ, ಸಂಪುಟ–5, ಪುಟ–48, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 1988)

ಹಝ್ರತ್ ಪೈಗಂಬರ್(ಸ)ರ ಅನುಸರಣೆ ಮಾಡಿರುವುದಾಗಿಯೂ ಇಸ್ಲಾಮಿನ ಶ್ರೇಷ್ಠತೆಯನ್ನು ಒಪ್ಪಿಕೊಂಡಿರುವುದಾಗಿ ಅಬುಸುಫ್‌ಯಾನ್ ಹೇಳಿದ ಘಟನೆಯ ವಿಶದ ವಿವರಣೆ ಹಿಂದೆ ಕೂಡ ಮಾಡಿದ್ದೇನೆ. ಹೇಗಿದ್ದರೂ ಇಬ್ನು ಉಖ್ಬ ವಿವರಿಸುತ್ತಾರೆ: ಅಬುಸುಫ್‌ಯಾನ್ ಮತ್ತು ಹಕೀಂ ಬಿನ್ ಹಝಾಂ ಮರಳಿಹೋಗುವಾಗ ಹಝ್ರತ್ ಅಬ್ಬಾಸ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನನಗೆ ಅಬುಸುಫ್‌ಯಾನಿನ ಇಸ್ಲಾಂ ಸ್ವೀಕಾರದ ಬಗ್ಗೆ ಸಂದೇಹ ಮತ್ತು ಭಯವಿದೆ. ಆದ್ದರಿಂದ ಅವನು ಇಸ್ಲಾಮನ್ನು ಸರಿಯಾಗಿ ಮನವರಿಕೆ ಮಾಡಿಕೊಳ್ಳಲು ಮತ್ತು ನಿಮ್ಮೊಂದಿಗೆ ಅಲ್ಲಾಹನ ಸೈನ್ಯವನ್ನು ನೋಡಿಕೊಳ್ಳುವಂತಾಗಲಿಕ್ಕಾಗಿ ಅವನನ್ನು ಮರಳಿ ಕರೆಯಿರಿ. ಮತ್ತೊಂದು ವರದಿಯಲ್ಲಿ ಇಬ್ನು ಶೈಬ ವರದಿ ಮಾಡುತ್ತಾರೆ: ಅಬುಸುಫ್‌ಯಾನ್ ಮರಳಿಹೋಗಲು ಹೊರಟಾಗ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ಆಜ್ಞಾಪಿಸುವುದಾದರೆ ಅಬುಸುಫ್‌ಯಾನ್ ಹೊರಟು ಹೋಗುವುದನ್ನು ನಾನು ತಡೆಯುತ್ತೇನೆ. ಮತ್ತೊಂದು ವರದಿಯಲ್ಲಿ ಇಬ್ನು ಇಸ್‌ಹಾಖ್ ವರದಿ ಮಾಡುತ್ತಾರೆ: ಅಬುಸುಫ್‌ಯಾನ್ ಮರಳಿಹೋಗುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ಬಾಸ್(ರ)ರೊಡನೆ ಹೇಳಿದರು: ಅಬುಸುಫ್‌ಯಾನನ್ನು ಕಣಿವೆಯ ಮಾರ್ಗವಾಗಿ ಹೋಗಿ ತಡೆದು ನಿಲ್ಲಿಸು. ಹೀಗೆ ಹಝ್ರತ್ ಅಬ್ಬಾಸ್(ರ) ಅಬುಸುಫ್‌ಯಾನನ್ನು ಭೇಟಿಯಾದರು ಮತ್ತು ಅವನನ್ನು ಮಾರ್ಗ ಮಧ್ಯೆ ತಡೆದರು. ಆಗ ಅಬುಸುಫ್‌ಯಾನ್ ಕೇಳಿದನು: ಹೇ ಬನೀ ಹಾಶಿಂ, ನೀನು ಮೋಸಮಾಡುತ್ತಿದ್ದೀಯ? ಹಝ್ರತ್ ಅಬ್ಬಾಸ್(ರ) ಹೇಳಿದರು: ಹೇ ಅಬುಸುಫ್‌ಯಾನ್, ನಾನು ಮೋಸಮಾಡುತ್ತಿಲ್ಲ. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಅಬ್ಬಾಸ್(ರ) ಹೇಳಿದರು: ನಾವು ಖಂಡಿತ ಮೋಸಮಾಡುವವರಲ್ಲ, ಆದರೆ ಸತ್ಯನಿಷೇಧಿಗಳ ಎದುರಾಗಿ ತಯಾರು ಮಾಡಲಾಗಿರುವ ಅಲ್ಲಾಹನ ಸೈನ್ಯವನ್ನು ನೀನು ನೋಡುವಂತಾಗಲು ನೀನು ಬೆಳಿಗ್ಗೆಯಾಗುವ ವರೆಗೆ ಕಾಯುತ್ತಾ ಇರಬೇಕು. ಹೀಗೆ ಹಝ್ರತ್ ಅಬ್ಬಾಸ್(ರ) ಅಬುಸುಫ್‌ಯಾನನ್ನು ಆ ಕಣಿವೆಯಲ್ಲಿ ಬೆಳಿಗ್ಗೆಯಾಗುವ ವರೆಗೆ ತಡೆದು ನಿಲ್ಲಿಸಿದರು.
(ಸಬ್ಲುಲ್ ಹುದಾ, ಸಂಪುಟ–5, ಪುಟ–218, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಡಬನಾನ್ 1993)

ಇಸ್ಲಾಮಿನ ಸೈನ್ಯ ಅಬುಸುಫ್‌ಯಾನಿನ ಮುಂದಿನಿಂದ ಸಾಗುತ್ತಿದ್ದ ಬಗ್ಗೆ ವಿವರಿಸುತ್ತಾ ಸುಬುಲುಲ್‌ಹುದಾ ವರ್ತಿಶಾದಿನಲ್ಲಿ ಹೀಗೆ ಬರೆಯಲಾಗಿದೆ: ಅಬುಸುಫ್‌ಯಾನಿನ ಮುಂದೆ ಹಸಿರು ಬಟ್ಟೆಗಳನ್ನು ಧರಿಸಿದ್ದ ಹಝ್ರತ್ ಪೈಗಂಬರ್(ಸ)ರ ಸೈನ್ಯ ಬಂತು. ಸೈನ್ಯದಲ್ಲಿ ಮುಹಾಜಿರರು ಮತ್ತು ಅನ್ಸಾರರು ಇದ್ದರು. ಸೈನ್ಯದಲ್ಲಿ ಸಣ್ಣ ಬಾವುಟಗಳು ಮತ್ತು ದೊಡ್ಡ ಧ್ವಜಗಳಿದ್ದುವು. ಅನ್ಸಾರಿನ ಪ್ರತಿಯೊಂದು ಗೋತ್ರದವರಲ್ಲಿ ಒಂದು ಸಣ್ಣ ಬಾವುಟ ಮತ್ತು ದೊಡ್ಡದಾದ ಒಂದು ಧ್ವಜವಿತ್ತು. ಸೈನಿಕರು ಯುದ್ಧ ವಸ್ತ್ರಗಳನ್ನು ಧರಿಸಿದ್ದರು. ಸೈನಿಕರ ಕೇವಲ ಕಣ್ಣುಗಳನ್ನು ಕಾಣಬಹುದಾಗಿತ್ತು. ಅವರಲ್ಲಿ ನಡುನಡುವೆ ಹಝ್ರತ್ ಉಮರ್(ರ)ರ ಉಚ್ಚ ಶಬ್ಧ ಮೊಳಗುತ್ತಿತ್ತು. ಸೈನ್ಯದ ಮೊದಲ ಭಾಗ ಕೊನೆಯ ಭಾಗದೊಂದಿಗೆ ಬಂದುಸೇರಲಿಕ್ಕಾಗಿ ಮೆಲ್ಲಮೆಲ್ಲನೇ ಚಲಿಸಲು ಅವರು ಹೇಳುತ್ತಿದ್ದರು. ಈ ಸೈನ್ಯದಲ್ಲಿ ಒಂದು ಸಾವಿರ ಜನರು ಯುದ್ಧ ಕವಚಗಳನ್ನು ಧರಿಸಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಸಅದ್ ಬಿನ್ ಉಬಾದ(ರ)ರಿಗೆ ನೀಡಿದರು ಮತ್ತು ಅವರು ಸೈನ್ಯದ ಮುಂದೆ ಮುಂದೆ ಇದ್ದರು. ಹಝ್ರತ್ ಸಅದ್(ರ) ಅಬೂಸುಫ್‌ಯಾನಿನ ಬಳಿಗೆ ತಲುಪಿದಾಗ ಅವರು ಉಚ್ಚಸ್ವರದಲ್ಲಿ ಹೀಗೆ ಹೇಳಿದರು: ಇಂದು ರಕ್ತಪಾತದ ದಿನವಾಗಿದೆ. ಇಂದು ನಿಷಿದ್ಧವಾದ ಸಂಗತಿಗಳನ್ನು ಧರ್ಮಬದ್ಧಗೊಳಿಸಲಾಗುವುವು. ಇಂದು ಖುರೈಶಿಗಳು ನಿಂದಿತರಾಗುವರು. ಆಗ ಅಬುಸುಫ್‌ಯಾನ್ ಹಝ್ರತ್ ಅಬ್ಬಾಸ್(ರ)ರೊಡನೆ ಹೇಳಿದನು: ಹೇ ಅಬ್ಬಾಸ್, ಇಂದು ನನ್ನ ಸಂರಕ್ಷಣೆಯ ಜವಾಬ್ದಾರಿ ನಿನ್ನದಾಗಿದೆ. ಅನಂತರ ಇತರ ಗೋತ್ರಗಳು ಅಲ್ಲಿಂದ ದಾಟಿ ಹೋದುವು. ಅನಂತರ ಹಝ್ರತ್ ಪೈಗಂಬರ್(ಸ)ರನ್ನು ಕಾಣಬಹುದಾಗಿತ್ತು. ಅವರು ತನ್ನ ಒಂಟೆಯಾದ ಖಸ್‌ವದಲ್ಲಿ ಸವಾರರಾಗಿದ್ದರು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಸೈದ್ ಬಿನ್ ಹಝೀರ್‌ರ ಮಧ್ಯೆ ಹಝ್ರತ್ ಪೈಗಂಬರ್(ಸ) ಮಾತುಕತೆ ನಡೆಸುತ್ತಾ ನಡೆದು ಬರುತ್ತಿದ್ದರು. ಅವರು ಹಝ್ರತ್ ಪೈಗಂಬರ್(ಸ) ಆಗಿರುವವರು ಎಂದು ಹಝ್ರತ್ ಅಬ್ಬಾಸ್(ರ) ಅಬುಸುಫ್‌ಯಾನನೊಡನೆ ಹೇಳಿದರು.
(ಸಬ್ಲುಲ್ ಹುದಾ, ಸಂಪುಟ–5, ಪುಟ–220–221, ದಾರುಲ್ ಕುತುಬ್ ಬೈರೂತ್ ಲಬನಾನ್ 1993)

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಮಕ್ಕಾ ವಿಜಯದ ಸಂದರ್ಭದಲ್ಲಿ ಮಕ್ಕದಲ್ಲಿ ಪ್ರವೇಶಿಸಿದಾಗ, ಮಹಿಳೆಯರು ಕುದುರೆಗಳ ಮುಖಗಳ ಮೇಲೆ ತಮ್ಮ ಹೊದಿಕೆಗಳಿಂದ ಹೊಡೆಯುತ್ತಾ ಅವುಗಳನ್ನು ಹಿಂದಕ್ಕೆ ಸರಿಸುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಹಝ್ರತ್ ಅಬೂಬಕರ್(ರ) ಕಡೆಗೆ ನೋಡಿಕೊಂದು ಹೇಳಿದರು: ಹೇ ಅಬೂಬಕರ್, ಹಸ್ಸಾನ್ ಬಿನ್ ಸಾಬಿತ್ ಏನು ಹಾಡಿದ್ದರು ಎಂದು ಹೇಳು. ಆಗ ಹಝ್ರತ್ ಅಬೂಬಕರ್(ರ) ಆ ಪದ್ಯಪಂಕ್ತಿಗಳನ್ನು ಓದಿಹೇಳಿದರು:

**ಅದಿಮತ್ ಬುನಿಯತೀ ಇಲ್ಲಮ್ ತರೌಹಾ**
**ತುಸೀರುನ್ನಖ್‌ಅ ಮೌಇದುಹಾ ಕದಾಅ**
**ಯನಾಝಿಈನಲ್ ಅಇನ್ನತಿ ಮುಸ್‌ರಿಹಾತ್**

**ಯುಲತ್ತಿಮುಹನ್ನ ಬಿಲ್‌ಖುಮ್‌ರಿನ್ನಿಸಾ**

ಯಾವ ಸೈನ್ಯದ ಬಗ್ಗೆ ಅದು ಕದಾ ಪರ್ವತಕ್ಕೆ ತಲುಪುವುದಾಗಿ ವಾಗ್ದಾನ ನೀಡಲ್ಪಟ್ಟಿದೆಯೋ, ಆ ಸೈನ್ಯವು ಧೂಳೆಬ್ಬಿಸುತ್ತಾ ಹೋಗುವುದನ್ನು ನೀನು ಕಾಣದಿದ್ದರೆ, ನಾನು ನನ್ನ ಪ್ರಿಯ ಮಗಳನ್ನು ಬಿಟ್ಟುಬಿಡುತ್ತೇನೆ. ಎಂದರೆ, ಇಂತಹ ಒಂದು ಘಟನೆ ಖಂಡಿತ ನಡೆಯುವುದು. ಆ ಸೈನ್ಯದ ವೇಗವಾಗಿ ಚಲಿಸುವ ಕುದುರೆಗಳು ತಮ್ಮ ಲಗಾಮನ್ನು ಎಳೆಯುತ್ತಿರುವುವು ಮತ್ತು ಮಹಿಳೆಯರು ಅವುಗಳನ್ನು ತಮ್ಮ ಹೊದಿಕೆಗಳಿಂದ ಹೊಡೆಯುವರು.

ಈ ಪದ್ಯಪಂಕ್ತಿಗಳನ್ನು ಹಝ್ರ‌ತ್ ಅಬೂಬಕರ್(ರ) ಓದಿಹೇಳಿದಾಗ ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಹಸ್ಸಾನ್ ಹೇಳಿದ ಕದಾ ಎಂಬ ಪ್ರದೇಶದ ಮಾರ್ಗವಾಗಿ ಮಕ್ಕಾ ಪಟ್ಟಣವನ್ನು ಪ್ರವೇಶಿಸೋಣ.

ಕದಾ ಎಂಬುದು ಅರಫಾತಿನ ಮತ್ತೊಂದು ಹೆಸರಾಗಿದೆ. ಇದೊಂದು ಪರ್ವತ ಮಾರ್ಗವಾಗಿದೆ. ಅದು ಮಕ್ಕದ ಹೊರಗಿನಿಂದ ಶುರುವಾಗಿ ಮಕ್ಕದೊಳಗೆ ಪ್ರವೇಶಿಸುತ್ತದೆ. (ಫರ್ಹಂಗ್ ಸೀರತ್, ಪುಟ–242, ಝುವಾರ ಅಕಾಡಮಿ ಕರಾಚಿ 2003)

ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರ‌ತ್ ಪೈಗಂಬರ್(ಸ) ಈ ಮಾರ್ಗವಾಗಿಯೇ ಮಕ್ಕದೊಳಗೆ ಪ್ರವೇಶಿಸಿದ್ದರು. ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರ‌ತ್ ಪೈಗಂಬರ್(ಸ) ಅಭಯ ನೀಡುವುದಾಗಿ ಘೋಷಿಸಿದಾಗ ಹಝ್ರ‌ತ್ ಅಬೂಬಕರ್(ರ) ಹಝ್ರ‌ತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಬುಸುಫ್‌ಯಾನ್ ಗೌರವವನ್ನು ಇಷ್ಟಪಡುತ್ತಾನೆ. ಆಗ ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಯಾರು ಅಬುಸುಫ್‌ಯಾನಿನ ಮನೆಗೆ ಪ್ರವೇಶಿಸುವರೋ ಅವರಿಗೆ ಕೂಡ ಅಭಯ ನೀಡಲಾಗುವುದು. (ಶರಹ್ ಅಝ್ಝುರ್‌ಖಾನಿ ಅಲಲ್ ಮವಾಹಿಬುದ್ದುನಿಯ, ಭಾಗ–3, ಪುಟ–421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಮಕ್ಕಾ ವಿಜಯದ ನಂತರ ಹಝ್ರ‌ತ್ ಪೈಗಂಬರ್(ಸ)ರ ಆದೇಶ ಪ್ರಕಾರ ಹುಬುಲ್ ವಿಗ್ರಹವನ್ನು ಬೀಳಿಸಲಾಯಿತು ಮತ್ತು ಹಝ್ರ‌ತ್ ಪೈಗಂಬರ್(ಸ) ಅದರ ಸಮೀಪ ನಿಂತಿದ್ದರು. ಆಗ ಹಝ್ರ‌ತ್ ಝುಬೇರ್ ಬಿನ್ ಅವಾಮ್(ರ) ಅಬುಸುಫ್‌ಯಾನಿನೊಡನೆ ಹೇಳಿದರು: ಎಲ್ಯೆ ಅಬುಸುಫ್‌ಯಾನ್, ಹುಬುಲ್ ವಿಗ್ರಹವನ್ನು ಬೀಳಿಸಲಾಗಿದೆ. ಉಹದ್ ಯುದ್ಧದ ದಿನ ಅದು ನಿಮ್ಮನ್ನು ಅನುಗ್ರಹಿಸಿದ್ದನು ಎಂದು ನೀನು ಹೇಳಿದ್ದಾಗ ನೀನು ಅದರ ಕುರಿತು ಬಹಳ ಗರ್ವದಲ್ಲಿ ಇದ್ದೆ. ಆಗ ಅಬುಸುಫ್‌ಯಾನ್ ಹೇಳಿದನು: ಹೇ ಅವಾಮಿನ ಪುತ್ರಾ, ಈ ಮಾತುಗಳನ್ನು ಈಗ ಬಿಟ್ಟುಬಿಡು. ಏಕೆಂದರೆ, ಹಝ್ರ‌ತ್ ಪೈಗಂಬರ್(ಸ) ಆರಾಧಿಸುವ ಅಲ್ಲಾಹನು ಅಲ್ಲದೇ ಬೇರೆ ದೇವನಿರುತ್ತಿದ್ದರೆ, ನಮಗೆ ಇಂದು ಇಂತಹ ಸ್ಥಿತಿ ಬರುತ್ತಿರಲಿಲ್ಲ. ಆದ್ದರಿಂದ ಅಲ್ಲಾಹನಲ್ಲದೇ ದೇವನಿಲ್ಲವೆಂದು ನನಗೆ ಈಗ ಗೊತ್ತಾಗಿ ಬಿಟ್ಟಿದೆ.

ಅನಂತರ ಹಝ್ರ‌ತ್ ಪೈಗಂಬರ್(ಸ) ಕಅ್‌ಬ ಭವನದ ಒಂದು ಮೂಲೆಯಲ್ಲಿ ಕುಳಿತುಕೊಂಡರು ಮತ್ತು ಜನರು ಅವರ ಸುತ್ತ ಒಟ್ಟುಗೂಡಿದ್ದರು. ಹಝ್ರ‌ತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಮಕ್ಕಾ ವಿಜಯದಂದು ಹಝ್ರ‌ತ್ ಪೈಗಂಬರ್(ಸ) ಕುಳಿತುಕೊಂಡಿದ್ದರು ಮತ್ತು ಹಝ್ರ‌ತ್ ಅಬೂಬಕರ್(ರ) ಖಡ್ಗವನ್ನು ಎತ್ತಿ ಅವರ ಸಂರಕ್ಷಣೆಗಾಗಿ ಅವರ ತಲೆಭಾಗದಲ್ಲಿ ನಿಂತಿದ್ದರು. (ಸಬ್ಲುಲ್ ಹುದಾ, ಸಂಪುಟ–5, ಪುಟ–235, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 1993)

ಹುನೈನ್ ಯುದ್ಧದ ಕುರಿತು ಪ್ರಸ್ತಾಪ ಲಭಿಸುತ್ತದೆ. ಹುನೈನ್ ಯುದ್ಧವನ್ನು ಹವಾಝುನ್ ಯುದ್ಧವೆಂದೂ ಔತಾಸ್ ಯುದ್ಧವೆಂದೂ ಹೇಳಲಾಗುತ್ತದೆ. ಹುನೈನ್ ಎಂಬುದು ಮಕ್ಕ ಮತ್ತು ತಾಯಿಫಿನ ನಡುವೆ ಮಕ್ಕದಿಂದ 30 ಮೈಲುಗಳ ದೂರದಲ್ಲಿರುವ ಒಂದು ಕಣಿವೆಯ ಹೆಸರಾಗಿದೆ. ಹುನೈನ್ ಯುದ್ಧವು ಹಿಜರೀ 8, ಶವ್ವಾಲ್ ಮಾಸದಲ್ಲಿ ಮಕ್ಕಾ ವಿಜಯದ ನಂತರ ನಡೆದಿತ್ತು. ಅಲ್ಲಾಹನು ತನ್ನ ಪ್ರವಾದಿ(ಸ)ರ ಕೈಗಳಿಂದ ಮಕ್ಕಾ ವಿಜಯವನ್ನು ದಯಪಾಲಿಸಿದಾಗ ಹವಾಝುನ್ ಮತ್ತು ಸಖೀಫ್‌ನ ಸರದಾರರು ಪರಸ್ಪರ ಭೇಟಿಯಾದರು. ಹಝ್ರ‌ತ್ ಪೈಗಂಬರ್(ಸ) ಅವರೊಡನೆಯೂ ಯುದ್ಧ ಮಾಡುವರು ಎಂದು ಅವರು ಭಯಗೊಂಡಿದ್ದರು. (ಅಸ್ಸೀರತುಲ್ ಹಲಬೀಯ, ಸಂಪುಟ–3, ಬಾಬ್ ಝಿಕ್ರುಲ್ ಮಗಾಝಿ, ಪುಟ–151, ದಾರುಲ್ ಕುತುಬ್ ಇಲ್‌ಮಿಯ 2002) (ಅಟ್ಲಸ್ ಸೀರತ್ ನಬವೀಯ, ಪುಟ–409, ದಾರುಸ್ಸಲಾಮ್ ರಿಯಾಝ್ 1424ಹಿ)

ಮಾಲಿಕ್ ಬಿನ್ ಔಫ್ ನಸರೀ ಎಂಬವನು ಅರೇಬಿಯದ ಗೋತ್ರಗಳನ್ನು ಒಟ್ಟುಸೇರಿಸಿದನು. ಹೀಗೆ ಅವನ ಬಳಿ ಹವಾಝುನ್‌ನೊಂದಿಗೆ ಬನೂಸಖೀಫ್, ಬನೂನಸರ್, ಬನೂಹಶಮ್, ಸಅದ್ ಬಿನ್ ಬಕರ್ ಮತ್ತು ಬನೂ ಹಿಲಾಲ್ ಗೋತ್ರದಿಂದ ಕೆಲವು ಜನರು ಒಟ್ಟುಸೇರಿದರು. (ಸೀರತ್ ಇಬ್ನೆ ಹಿಶ್ಶಾಮ್, ಪುಟ–761, ದಾರುಲ್ ಕುತುಬ್ ಇಲ್‌ಮಿಯ 2001)

ಈ ಎಲ್ಲರೂ ಒಂದುಗೂಡಿ ಔತಾಸ್ ಎಂಬ ಪ್ರದೇಶದಲ್ಲಿ ಬಂದುಸೇರಿದರು. ಔತಾಸ್ ಎಂಬುದು ಹುನೈನ್ ಕಣಿವೆಯ ಸಮೀಪವಿರುವ ಒಂದು ಕಣಿವೆಯಾಗಿದೆ. ಹಝ್ರ‌ತ್ ಪೈಗಂಬರ್(ಸ)ರ ಕುರಿತು ಮಾಹಿತಿಯನ್ನು ಪಡೆಯಲಿಕ್ಕಾಗಿ ಮಾಲಿಕ್ ಬಿನ್ ಔಫ್ ತನ್ನ ಗೂಢಚರನನ್ನು ಕಳುಹಿಸಿದನು. ಅವರೆಲ್ಲರೂ ಒಟ್ಟುಸೇರಿರುವ ಸುದ್ದಿ ಹಝ್ರ‌ತ್ ಪೈಗಂಬರ್(ಸ)ರಿಗೆ ತಲುಪಿದಾಗ, ಅವರು ತನ್ನ ಸಹಾಬಿಯರಲ್ಲಿ ಒಬ್ಬರಾದ ಹಝ್ರ‌ತ್ ಅಬ್ದುಲ್ಲಾಹ್ ಬಿನ್ ಅಬೂ ಅಸ್ಲಮರನ್ನು ಮಾಹಿತಿ ಪಡೆಯಲಿಕ್ಕಾಗಿ ಅವರ ಕಡೆಗೆ ಕಳುಹಿಸಿದರು. ಅನಂತರ ಹಝ್ರ‌ತ್ ಪೈಗಂಬರ್(ಸ) ಹವಾಝುನಿನ ಜನರನ್ನು ಎದುರಿಸಲಿಕ್ಕಾಗಿ ಹೊರಡಲು ತೀರ್ಮಾನ ಮಾಡಿದರು. ಯುದ್ಧಕ್ಕಾಗಿ ಸಫ್‌ವಾನ್ ಬಿನ್ ಉಮಯ್ಯ ಮತ್ತು ತನ್ನ ಚಿಕ್ಕಪ್ಪನ ಮಗನಾದ ನೌಫಲ್ ಬಿನ್ ಹಾರಿಸ್‌ರಿಂದ ಆಯುಧಗಳನ್ನು ಸಾಲವಾಗಿ ಪಡೆದರು. ಹೀಗೆ ಹಝ್ರ‌ತ್ ಪೈಗಂಬರ್(ಸ) 12 ಸಾವಿರ ಸೈನಿಕರೊಂದಿಗೆ ಬನೂ ಹವಾಝುನ್‌ರನ್ನು ಎದುರಿಸಲು ಹೊರಟು ಮುಂಜಾನೆ ಹುನೈನ್ ಎಂಬ ಪ್ರದೇಶಕ್ಕೆ ತಲುಪಿದರು ಮತ್ತು ಕಣಿವೆಗೆ ಪ್ರವೇಶಿಸಿದರು. ಮುಶ್ರಿಕರ ಸೈನ್ಯ ಮೊದಲೇ ಈ ಕಣಿವೆಯ ಪರ್ವತಗಳಲ್ಲಿ ಅಡಗಿ ಕುಳಿತುಕೊಂಡಿದ್ದರು. ಅವರು ಮುಸ್ಲಿಮರ ಮೇಲೆ ಅಚಾನಕ್ಕಾಗಿ ಹಲ್ಲೆ ನಡೆಸಿದರು ಮತ್ತು ಅವರು ಎಷ್ಟು ತೀವ್ರತರವಾಗಿ ಬಾಣಗಳನ್ನು ಚಲಾಯಿಸಿದರು ಎಂದರೆ, ಮುಸ್ಲಿಮರು ಹಿಮ್ಮೆಟ್ಟಿ ಓಡಿಹೋದರು ಮತ್ತು ಚದುರಿಹೋದರು. ಈ ಕಾರಣದಿಂದ ಹಝ್ರ‌ತ್ ಪೈಗಂಬರ್(ಸ)ರ ಬಳಿ ಕೇವಲ ಕೆಲವು ಸಹಾಬಿಯರು ಬಾಕಿಯುಳಿದರು. ಅವರಲ್ಲಿ ಹಝ್ರ‌ತ್ ಅಬೂಬಕರ್(ರ) ಕೂಡ ಇದ್ದರು.
(ಅಸೀರತುಲ್ ಹಲಬೀಯ, ಸಂಪುಟ–3, ಪುಟ–151–154, ದಾರುಲ್ ಕುತುಬ್ ಇಲ್‌ಮಿಯ 2002) (ಫರ್ಹಂಗೆ ಸೀರತ್, ಪುಟ–49, ಝುವಾರ ಅಕಾಡಮಿ ಕರಾಚಿ 2003)

ಅಬೂ ಇಸ್‌ಹಾಖ್ ವರದಿ ಮಾಡುತ್ತಾರೆ: ಒಬ್ಬ ವ್ಯಕ್ತಿ ಬರಾಅ್‌ರ ಬಳಿಗೆ ಬಂದು ಹೀಗೆ ಹೇಳಿದನು ನೀವು ಹುನೈನ್ ಯುದ್ಧದಂದು ಬೆನ್ನು ತಿರುಗಿಸಿ ಓಡಿ ಹೋಗಿದ್ದೀರಿ. ಆಗ ಬರಾಅ್ ಹೇಳಿದರು: ನಾನು ಹಝ್ರ‌ತ್ ಪೈಗಂಬರ್(ಸ)ರ ಕುರಿತು ಸಾಕ್ಷಿ ಹೇಳುತ್ತೇನೆ. ಅವರು ಹಿಮ್ಮೆಟ್ಟಿ ಹೋಗಿರಲಿಲ್ಲ. ಆದರೆ ಅವಸರಪಡುವ ಕೆಲವರು ಮತ್ತು ಆಯುಧವಿಲ್ಲದ ಕೆಲವರು ಹವಾಝುನ್ ಗೋತ್ರದ ಕಡೆಗೆ ಹೋಗಿದ್ದರು. ಹವಾಝುನ್ ಗೋತ್ರವು ಬಿಲ್ಲುಗಾರಿಕೆಯಲ್ಲಿ ನಿಪುಣರಾಗಿದ್ದ ಗೋತ್ರವಾಗಿತ್ತು. ಅವರು ಮಿಡತೆಯ ಹಿಂಡಿನಂತೆ ಬಾಣಗಳ ಮಳೆಯನ್ನು ಸುರಿಸಿದರು. ಈ ಕಾರಣದಿಂದ ಕೆಲವು ಮುಸ್ಲಿಮರು ತಮ್ಮ ಜಾಗದಿಂದ ಓಡಿಹೋದರು.
(ಸಹೀಹ್ ಮುಸ್ಲಿಮ್, ಕಿತಬುಲ್ ಜಿಹಾದ್ ವ ಸ್ಸೈರ್, ಹದೀಸ್–4616)

ಇಂತಹ ಸ್ಥಿತಿಯಲ್ಲಿ ಹಝ್ರ‌ತ್ ಪೈಗಂಬರ್(ಸ)ರ ಜೊತೆಗೆ ಮುಹಾಜಿರರಲ್ಲಿ ಹಝ್ರ‌ತ್ ಅಬೂಬಕರ್(ರ) ಮತ್ತು ಹಝ್ರ‌ತ್ ಉಮರ್(ರ) ಸ್ಥೈರ್ಯದಿಂದ ನಿಂತರು. ಹಝ್ರ‌ತ್ ಪೈಗಂಬರ್(ಸ)ರ ಕುಟುಂಬದವರಲ್ಲಿ ಹಝ್ರ‌ತ್ ಅಲಿ(ರ), ಹಝ್ರ‌ತ್ ಅಬ್ಬಾಸ್ ಬಿನ್ ಅಬ್ದುಲ್‌ಮುತಲ್ಲಿಬ್(ರ), ಅಬುಸುಫ್‌ಯಾನ್ ಬಿನ್ ಹಾರಿಸ್ ಮತ್ತು ಅವರ ಮಗನಾದ ಫಝ್‌ಲ್ ಬಿನ್ ಅಬ್ಬಾಸ್, ರಬೀಅ ಬಿನ್ ಹಾರಿಸ್, ಉಸಾಮ ಬಿನ್ ಝೈದ್ ಕೂಡ ಹಝ್ರ‌ತ್ ಪೈಗಂಬರ್(ಸ)ರ ಜೊತೆಗೆ ಇದ್ದರು ಎಂಬ ಪ್ರಸ್ತಾಪವಿದೆ.
(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–764, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರ‌ತ್ ಅಬೂಖತಾದ ವರದಿ ಮಾಡುತ್ತಾರೆ: ಹುನೈನ್ ಯುದ್ಧದ ಸಮಯದಲ್ಲಿ ನಾನು ಮುಸ್ಲಿಮರಲ್ಲಿ ಒಬ್ಬ ವ್ಯಕ್ತಿಯನ್ನು ಕಂಡೆನು. ಅವರು ಒಬ್ಬ ಮುಶ್ರಿಕಿನ ವಿರುದ್ಧ ಹೋರಾಡುತ್ತಿದ್ದರು. ಆಗ ಮತ್ತೊಬ್ಬ ಮುಶ್ರಿಕ್ ವ್ಯಕ್ತಿ ಮೋಸದಿಂದ ರಹಸ್ಯವಾಗಿ ಅವರ ಹಿಂದಿನಿಂದ ಅವರ ಮೇಲೆ ದಾಳಿ ನಡೆಸಿ ಅವರನ್ನು ಕೊಲ್ಲಲು ಬಯಸುತ್ತಿದ್ದನು. ಆಗ ನಾನು ಬೇಗನೇ ಮುಸ್ಲಿಮನ ಮೇಲೆ ಮೋಸದಿಂದ ಧಾಳಿ ನಡೆಸಲು ಹೋಗುತ್ತಿದ್ದ ವ್ಯಕ್ತಿಯ ಕಡೆಗೆ ಧಾವಿಸಿದೆ. ಅವನು ನನ್ನನ್ನು ಕೊಲ್ಲಲು ಕೈಯೆತ್ತಿದನು. ನಾನು ಅವನ ಕೈಯ ಮೇಲೆ ಖಡ್ಗವನ್ನು ಬೀಸಿ ಅವನ ಕೈಯನ್ನು ತುಂಡರಿಸಿದೆ. ಅನಂತರ ಅವನು ನನ್ನನ್ನು ಹಿಡಿದನು ಮತ್ತು ಅವನು ನನ್ನನ್ನು ಜೋರಾಗಿ ತಳ್ಳಿಹಾಕಿದನು. ಆಗ ನಾನು ನನ್ನ ನಿಯಂತ್ರಣವನ್ನು ಕಳೆದುಕೊಂಡೆನು. ಅನಂತರ ಅವನು ಸುಸ್ತಾಗಿ ನನ್ನನ್ನು ಬಿಟ್ಟುಬಿಟ್ಟನು. ಆಗ ನಾನು ಅವನನ್ನು ತಳ್ಳಿಹಾಕಿ ಅವನನ್ನು ಕೊಂದೆನು. ಮತ್ತೊಂದೆಡೆ ಮುಸ್ಲಿಮರು ಪರಾಜಿತರಾಗಿ ಪರಾರಿಯಾದರು. ನಾನು ಕೂಡ ಅವರ ಜೊತೆಗೆ ಓಡಿಹೋದೆನು. ಅನಂತರ ಜನರು ಮರಳಿಬಂದು ಹಝ್ರ‌ತ್ ಪೈಗಂಬರ್(ಸ)ರ ಸಮೀಪ ಒಟ್ಟುಸೇರಲು ಶುರುವಾಯಿತು. ಆಗ ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಯಾವನೇ ವ್ಯಕ್ತಿ ತಾನು ಕೊಂದ ವ್ಯಕ್ತಿಯ ಬಗ್ಗೆ ಸಾಕ್ಷ್ಯಧಾರವನ್ನು ನೀಡಿದರೆ, ತಾನು ಕೊಂದದಕ್ಕೆ ಪುರಾವೆಯನ್ನು ನೀಡಿದರೆ, ಕೊಲ್ಲಲ್ಪಟ್ಟ ವ್ಯಕ್ತಿಯ ಸಾಮಾನುಗಳು ಕೊಂದವನಿಗೆ ಲಭಿಸುವುದು. ನಾನು ಕೊಂದ ವ್ಯಕ್ತಿಯ ಕುರಿತು ಸಾಕ್ಷಿಯಾಗಿ ಯಾರಾದರೂ ಇರುವರೋ ಎಂದು ಹುಡುಕಲು ನಾನು ಎದ್ದೆ. ಆದರೆ ನನಗೆ ಸಾಕ್ಷ್ಯ ನುಡಿಯಲು ಯಾರೂ ಇರಲಿಲ್ಲ. ಆದ್ದರಿಂದ ನಾನು ಕುಳಿತುಕೊಂಡೆನು. ಅನಂತರ ನನಗೆ ಪುನಃ ಅದರ ಯೋಚನೆ ಬಂತು. ನಾನು ಆ ಕೊಲೆಯ ಘಟನೆಯನ್ನು ಹಝ್ರ‌ತ್ ಪೈಗಂಬರ್(ಸ)ರೊಡನೆ ಹೇಳಿದೆ. ಹಝ್ರ‌ತ್ ಪೈಗಂಬರ್(ಸ)ರ ಜೊತೆಗೆ ಕುಳಿತುಕೊಂಡಿದ್ದ ಒಬ್ಬ ವ್ಯಕ್ತಿ ಹಝ್ರ‌ತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ಆ ಕೊಲ್ಲಲ್ಪಟ್ಟ ವ್ಯಕ್ತಿಯ ಆಯುಧಗಳು ನನ್ನ ಬಳಿಯಿದೆ. ಆ ವ್ಯಕ್ತಿಗೆ ನನ್ನ ಬಳಿಯಲ್ಲಿರುವ ಈ ಆಯುಧಗಳಿಗೆ ಬದಲಾಗಿ ಬೇರೇನಾದರೂ ಕೊಟ್ಟು ತೃಪ್ತಿಪಡಿಸಿರಿ. ಆ ಆಯುಧಗಳು ನನ್ನ ಬಳಿಯಲ್ಲೇ ಇರಲಿ. ಹಝ್ರ‌ತ್ ಅಬೂಬಕರ್(ರ) ಅಲ್ಲಿ ಕುಳಿತುಕೊಂಡಿದ್ದರು. ಅವರು ಹೇಳಿದರು: ಹಝ್ರ‌ತ್ ಪೈಗಂಬರ್(ಸ) ಖುರೈಶಿನ ಒಬ್ಬ ಭೀರು ಮತ್ತು ಅಂಜುಬುರುಕನಿಗೆ ಸಾಮಾನುಗಳನ್ನು ಕೊಟ್ಟು, ಅಲ್ಲಾಹನು

ಮತ್ತು ಅಲ್ಲಾಹನ ಪ್ರವಾದಿಯ ಪರವಾಗಿ ಯುದ್ಧ ಮಾಡಿದ ಅಲ್ಲಾಹನ ಸಿಂಹಗಳಲ್ಲಿ ಒಂದು ಸಿಂಹಕ್ಕೆ ಏನೂ ಕೊಡದೇ ಇರಲು ಖಂಡಿತ ಸಾಧ್ಯವಲ್ಲ. ಹಝ್ರತ್ ಅಬೂಖತಾದ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಎದ್ದುನಿಂತರು ಮತ್ತು ಆ ಸಾಮಾನುಗಳನ್ನು ಆ ವ್ಯಕ್ತಿಯಿಂದ ಪಡೆದು ನನಗೆ ಕೊಟ್ಟರು. ನಾನು ಅದರ ಹಣದಿಂದ ಖರ್ಜೂರಗಳ ಒಂದು ತೋಟವನ್ನು ಖರೀದಿ ಮಾಡಿದೆ. ಅದು ಮುಸ್ಲಿಮನಾದ ನಂತರ ಯುದ್ಧ ಸಂಪತ್ತಿನಿಂದ ನಾನು ಖರೀದಿ ಮಾಡಿದ ಮೊದಲ ಸೊತ್ತಾಗಿತ್ತು. (ಸಹೀಹ್ ಬುಖಾರಿಮ ಹದೀಸ್-4322)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿರಿ, ಚರಿತ್ರೆಯಿಂದ ಗೊತ್ತಾಗುವುದೇನೆಂದರೆ, ಹುನೈನ್ ಯುದ್ಧದ ಸಂದರ್ಭದಲ್ಲಿ, ಶೌರ್ಯದ ಕೌಶಲವನ್ನು ತೋರಿಸುವೆವು ಎಂದು ಹೇಳುತ್ತಾ ಮಕ್ಕದ ಸತ್ಯನಿಷೇಧಿಗಳು ಇಸ್ಲಾಮಿನ ಸೈನ್ಯದಲ್ಲಿ ಸೇರಿಕೊಂಡಿದ್ದರು. ಆದರೆ ಬನೂಸಖೀಫ್‌ರ ಧಾಳಿಯನ್ನು ಎದುರಿಸಲಾಗದೇ ಯುದ್ಧ ಮೈದಾನದಿಂದ ಓಡಿ ಹೋದರು. ಎಷ್ಟರ ವರೆಗೆ ಎಂದರೆ, ಒಂದು ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಕೇವಲ 12 ಸಹಾಬಿಯರು ಬಾಕಿಯುಳಿದರು. ಹತ್ತು ಸಾವಿರದಷ್ಟು ಇದ್ದ ಇಸ್ಲಾಮಿನ ಸೈನ್ಯದಲ್ಲಿ ಗೊಂದಲವುಂಟಾಯಿತು. ಮೂರು ಸಾವಿರ ಬಿಲ್ಲುಗಾರರನ್ನು ಒಳಗೊಂಡಿದ್ದ ಸತ್ಯನಿಷೇಧಿಗಳ ಸೈನ್ಯವು ಹಝ್ರತ್ ಪೈಗಂಬರ್(ಸ)ರ ಎಡಗಡೆ ಮತ್ತು ಬಲಗಡೆ ಪರ್ವತಗಳನ್ನೇರಿ ಅವರ ಮೇಲೆ ಬಾಣ ಹಾರಿಸುತ್ತಿದ್ದರು. ಆದರೆ ಆಗಲೂ ಅವರು ಹಿಮ್ಮೆಟ್ಟಲು ಇಷ್ಟಪಡಲಿಲ್ಲ. ಬದಲಾಗಿ ಮುಂದಕ್ಕೆ ಹೋಗಲು ಬಯಸುತ್ತಿದ್ದರು. ಹಝ್ರತ್ ಅಬೂಬಕರ್(ರ) ಗಾಬರಿಗೊಂಡು ಹಝ್ರತ್ ಪೈಗಂಬರ್(ಸ)ರ ಸವಾರಿಯ ಲಗಾಮನ್ನು ಹಿಡಿದರು ಮತ್ತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನನ್ನ ಜೀವ ನಿಮಗೆ ಅರ್ಪಿತವಾಗಲಿ. ಇದು ಮುಂದಕ್ಕೆ ಹೋಗಬೇಕಾದ ಸಮಯವಲ್ಲ. ಮುಸ್ಲಿಮರ ಸೈನ್ಯ ಒಟ್ಟುಸೇರಿದ ನಂತರ ನಾವು ಮುಂದಕ್ಕೆ ಹೋಗೋಣ. ಆದರೆ ಹಝ್ರತ್ ಪೈಗಂಬರ್(ಸ) ಬಹಳ ಆವೇಶದಿಂದ ಹೀಗೆ ಹೇಳಿದರು: ನನ್ನ ಸವಾರಿಯ ಲಗಾಮನ್ನು ಬಿಡು. ಅನಂತರ ಅವರು ಸವಾರಿಯನ್ನು ಓಡಿಸುತ್ತಾ ಮುಂದಕ್ಕೆ ಧಾವಿಸಿದರು ಮತ್ತು ಹೀಗೆ ಹೇಳುತ್ತಿದ್ದರು: **ಅನನ್ನಬಿಯ್ಯು ಲಾ ಕಧಿಬ್, ಅನ ಇಬ್ನು ಅಬ್ದುಲ್‌ಮುತಲ್ಲಿಬ್**. ಎಂದರೆ, ಯಾರ ಬಗ್ಗೆ ಸ್ಥಿರವಾದ ಸಂರಕ್ಷಣೆಯ ವಾಗ್ದಾನವಿದೆಯೋ ನಾನು ಆ ವಾಗ್ದತ್ತ ಪ್ರವಾದಿಯಾಗಿರುವೆನು. ನಾನು ಸುಳ್ಳುವಾದಿಯಲ್ಲ. ಆದ್ದರಿಂದ ನೀವು ಮೂರು ಸಾವಿರ ಬಿಲ್ಲುಗಾರರಾಗಿದ್ದರೂ ಮೂವತ್ತು ಸಾವಿರ ಬಿಲ್ಲುಗಾರರಾಗಿದ್ದರೂ ನನಗೆ ಅದರ ಪರಿವೆಯಿಲ್ಲ.

ಆದರೆ ಎಲೈ ಬಹುದೇವಾರಾಧಕರೇ, ನನ್ನ ಈ ಧೈರ್ಯವನ್ನು ನೋಡಿಕೊಂಡು ನನ್ನನ್ನು ದೇವನೆಂದು ಭಾವಿಸಬೇಡಿರಿ. ನಾನೊಬ್ಬ ಮನುಷ್ಯನಾಗಿರುವೆನು. ನಿಮ್ಮ ಸರದಾರ ಅಬ್ದುಲ್ ಮುತಲ್ಲಿಬರ ಮೊಮ್ಮಗನಾಗಿರುವೆನು.

ಹಝ್ರತ್ ಪೈಗಂಬರ್(ಸ)ರ ಚಿಕ್ಕಪ್ಪರಾದ ಹಝ್ರತ್ ಅಬ್ಬಾಸ್‌ರ ಸ್ವರ ಬಹಳ ಉಚ್ಚವುಳ್ಳದ್ದಾಗಿತ್ತು. ಹಝ್ರತ್ ಪೈಗಂಬರ್(ಸ) ಅವರ ಕಡೆಗೆ ನೋಡಿಕೊಂಡು ಹೀಗೆ ಹೇಳಿದರು: ಹೇ ಅಬ್ಬಾಸ್, ಮುಂದಕ್ಕೆ ಬಾ ಮತ್ತು ಉಚ್ಚ ಸ್ವರದಲ್ಲಿ ಹೀಗೆ ಜನರಿಗೆ ಕರೆನೀಡು: ಎಲೈ ಸೂರಃ ಬಖರಃದ ಸಹಾಬಿಯರೇ, ಎಂದರೆ, ಸೂರಃ ಬಖರ ಕಂಠಪಾಠ ಮಾಡಿರುವ ಸಹಾಬಿಯರೇ, ಎಲೈ, ಹುದೈಬಿಯದ ದಿನ ಮರದ ಕೆಳಗೆ ಬೈಅತ್ ಮಾಡಿರುವವರೇ, ಅಲ್ಲಾಹನ ಪ್ರವಾದಿ ನಿಮ್ಮನ್ನು ಕರೆಯುತ್ತಿದ್ದಾರೆ.

ಮಕ್ಕದ ನವ ಮುಸ್ಲಿಮರ ಅಂಜುಬುರುಕಿನ ಕಾರಣದಿಂದ ಮುಸ್ಲಿಮರ ಸೈನ್ಯದ ಮುಂದಿನ ಭಾಗ ಹಿಂದಕ್ಕೆ ಸರಿದು ಓಡಿಹೋದಾಗ ನಮ್ಮ ಸವಾರಿಗಳು ಕೂಡ ಓಡಿಹೋಗುತ್ತಿದ್ದುವು. ನಾವು ಎಷ್ಟು ತಡೆದರೂ ಅವು ಹಿಂದಿನ ಕಡೆಗೆ ಓಡಿಹೋಗುತ್ತಿದ್ದುವು. ಕೊನೆಗೆ ಅಬ್ಬಾಸ್‌ರ ಶಬ್ದ ಮೈದಾನದಲ್ಲಿ ಮೊಳಗುತ್ತಿತ್ತು. ಅವರು ಹೀಗೆ ಹೇಳುತ್ತಿದ್ದರು: ಎಲೈ ಸೂರಃ ಬಖರಃದ ಸಹಾಬಿಯರೇ, ಎಲೈ, ಹುದೈಬಿಯದ ದಿನ ಮರದ ಕೆಳಗೆ ಬೈಅತ್ ಮಾಡಿರುವವರೇ, ಅಲ್ಲಾಹನ ಪ್ರವಾದಿ ನಿಮ್ಮನ್ನು ಕರೆಯುತ್ತಿದ್ದಾರೆ. ಈ ಶಬ್ದ ನನ್ನ ಕಿವಿಗೆ ಮುಟ್ಟಿದಾಗ ನಾನು ಜೀವಂತನಲ್ಲ, ಬದಲಾಗಿ ಮೃತಶರೀರವಾಗಿರುವೆನು ಎಂದು ನಾನು ಸ್ವತಃ ತಿಳಿದುಕೊಂಡೆನು ಮತ್ತು ಇಸ್ರಾಫೀಲಿನ ಶಂಕುನಾದ ಸುತ್ತಮುತ್ತ ಮೊಳಗುತ್ತಿದೆ ಎಂದು ತೋರುತ್ತಿತ್ತು. ನಾನು ನನ್ನ ಒಂಟೆಯ ಲಗಾಮನ್ನು ಜೋರಾಗಿ ಎಳೆದಾಗ ಅದರ ತಲೆ ಮೈಯಿಗೆ ತಗುಲಿತು. ಆದರೆ ಅದು ಹೆದರಿಕೊಂಡಿತ್ತು ಎಂದರೆ, ನಾನು ಅದರ ಲಗಾಮನ್ನು ಸಡಿಲಗೊಳಿಸಿದಾಗ ಅದು ಹಿಂದುಗಡೆ ಓಡಿತು. ಆಗ ನಾನು ಮತ್ತು ನನ್ನ ಅನೇಕ ಸಂಗಡಿಗರು ಖಡ್ಗಗಳನ್ನು ಹೊರತೆಗೆದರು. ಅವರಲ್ಲಿ ಕೆಲವರು ಒಂಟೆಗಳ ಮೇಲಿಂದ ಜಿಗಿದರು ಮತ್ತು ಕೆಲವರು ಒಂಟೆಗಳ ಕೊರಳನ್ನು ಕಡಿದುಹಾಕಿದರು ಹಾಗೂ ಹಝ್ರತ್ ಪೈಗಂಬರ್(ಸ)ರ ಕಡೆಗೆ ಓಡಲು ಶುರುಮಾಡಿದರು. ಹೀಗೆ ಅನಿಯಂತ್ರಿತವಾಗಿ ಮಕ್ಕದ ಕಡೆಗೆ ಪರಾರಿಯಾಗುತ್ತಿದ್ದ 10 ಸಾವಿರ ಸೈನಿಕರ ಸೈನ್ಯ ಕೆಲವೇ ಕ್ಷಣಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಸುತ್ತ ಒಟ್ಟುಸೇರಿದರು. ಸ್ವಲ್ಪ ಸಮಯದಲ್ಲೇ ಪರ್ವತಗಳ ಮೇಲೆ ಹತ್ತಿ ಆ ಸೈನ್ಯವು ಶತ್ರುಗಳನ್ನು ನಾಶಪಡಿಸಿತು. ಹೀಗೆ ಆ ಅಪಾಯಕಾರಿ ಸೋಲು ಒಂದು ಮಹತ್ತಾದ ವಿಜಯದ ರೂಪದಲ್ಲಿ ಬದಲಾಯಿತು. (ತಫ್ಸೀರೆ ಕಬೀರ್, ಸಂಪುಟ-6, ಪುಟ-409-410)

ತಾಯಿಫ್ ಯುದ್ಧದ ಕುರಿತು ಹೀಗೆ ವರದಿಯಾಗಿದೆ. ತಾಯಿಫ್ ಎಂಬುದು ಮಕ್ಕದಿಂದ ಪಶ್ಚಿಮದ ಕಡೆಗೆ ಸುಮಾರು 90 ಕಿ.ಮಿ. ದೂರದಲ್ಲಿರುವ ಒಂದು ಪ್ರಸಿದ್ಧ ಪಟ್ಟಣವಾಗಿದೆ ಮತ್ತು ಹಿಜಾಝಿನ ಒಂದು ಪರ್ವತದ ಪಟ್ಟಣವಾಗಿದೆ. ಇಲ್ಲಿ ದ್ರಾಕ್ಷೆ ಮತ್ತು ಇತರ ಹಣ್ಣುಗಳು ಸಾಕಷ್ಟು ಬೆಳೆಯುತ್ತವೆ. ಇಲ್ಲಿ ಬನೂ ಸಖೀಫ್ ಗೋತ್ರ ನೆಲೆಸಿತ್ತು. (ಫರ್ಹಂಗ್ ಸೀರತ್, ಪುಟ-178, ಝುವಾರ ಅಕಾಡಮಿ ಕರಾಚಿ 2003)

ಹವಾಝುನ್ ಮತ್ತು ಸಖೀಫ ಗೋತ್ರದ ಜನರು ಪರಾಜಿತಗೊಂಡ ನಂತರ ತನ್ನ ಸರದಾರ ಮಾಲಿಕ್ ಬಿನ್ ಔಫ್ ನಸರಿಯ ಜೊತೆಗೆ ಓಡಿಕೊಂಡು ತಾಯಿಫಿಗೆ ಹೋಗಿದ್ದರು ಮತ್ತು ಅವರು ಕೋಟೆಯೊಳಗೆ ಅವಿತುಕೊಂಡಿದ್ದರು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹುನೈನ್ ಯುದ್ಧದ ನಂತರ ಜಿಅ್‌ರಾನದಲ್ಲಿ ಯುದ್ಧ ಸಂಪತ್ತು ಒಟ್ಟುಗೂಡಿಸಿ ವಿತರಣೆ ಮಾಡಿದರು ಮತ್ತು ಅದೇ ತಿಂಗಳು, ಹಿಜರೀ 8ರಲ್ಲಿ ತಾಯಿಫ್ ಕಡೆಗೆ ಹೊರಟರು. (ಅರ್ರಹೀಖುಲ್ ಮಖ್ತೂಮ್, ಪುಟ-567, ಅಲ್‌ಮಕ್ತಬುಲ್ ಸಲಫೀಯ ಲಾಹೋರ್)

ಜಿಅ್‌ರಾನ ಎಂಬುದು ಮಕ್ಕ ಮತ್ತು ತಾಯಿಫಿನ ಮಾರ್ಗದಲ್ಲಿ ಮಕ್ಕದ ಸಮೀಪವಿರುವ ಒಂದು ಬಾವಿಯ ಹೆಸರಾಗಿದೆ. ಮಕ್ಕದಿಂದ ಅದರ ದೂರ 27 ಕಿ.ಮಿ. ದೂರವಾಗಿತ್ತು. (ಫರ್ಹಂಗ್ ಸೀರತ್, ಪುಟ-88, ಝುವಾರ ಅಕಾಡಮಿ ಕರಾಚಿ 2003)

ಹಝ್ರತ್ ಪೈಗಂಬರ್(ಸ) ಎಷ್ಟು ದಿನಗಳ ಕಾಲ ತಾಯಿಫಿಗೆ ಮುತ್ತಿಗೆ ಹಾಕಿದರು ಎಂಬುದರ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಹತ್ತಕ್ಕಿಂತ ಹೆಚ್ಚು ದಿನಗಳು ಮುತ್ತಿಗೆ ಹಾಕಿದರು ಎಂದು ಕೆಲವರು ಹೇಳುತ್ತಾರೆ. ಇಪ್ಪತ್ತಕ್ಕಿಂತ ಹೆಚ್ಚು ದಿನಗಳು ಮುತ್ತಿಗೆ ಹಾಕಿದರು ಎಂದು ಕೆಲವರು ಹೇಳುತ್ತಾರೆ. 20 ದಿನಗಳು ಮುತ್ತಿಗೆ ಹಾಕಿದರು ಎಂದೂ ಹೇಳಲಾಗುತ್ತದೆ. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಸುಮಾರು 30 ರಾತ್ರಿಗಳು ತಾಯಿಫ್ ನಿವಾಸಿಗಳ ಮುತ್ತಿಗೆ ಹಾಕಿದರು. (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ-5, ಪುಟ-388, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

17 ರಾತ್ರಿಗಳು ಮುತ್ತಿಗೆ ಹಾಕಲಾಯಿತು ಎಂದೂ ಇಬ್ನು ಹಿಶಾಮ್ ಹೇಳುತ್ತಾರೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-792, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಸಹೀಹ್ ಮುಸ್ಲಿಮಿನಲ್ಲಿ ಹಝ್ರತ್ ಅನಸ್(ರ)ರಿಂದ ಹೀಗೆ ವರದಿಯಾಗಿದೆ: ನಾವು 40 ರಾತ್ರಿಗಳು ಅವರ ಕೋಟೆಯನ್ನು ಸುತ್ತುವರೆದಿದ್ದೆವು. (ಸಹೀಹ್ ಮುಸ್ಲಿಮ್, ಕಿತಾಬುಝ್ಝಕಾತ್, ಹದೀಸ್-2442)

ಹಝ್ರತ್ ಪೈಗಂಬರ್(ಸ) ತಾಯಿಫಿನಲ್ಲಿ ಸಖೀಫ್ ಗೋತ್ರದ ಮುತ್ತಿಗೆ ಹಾಕಿದ್ದಾಗ, ಅವರು ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು: ಹೇ ಅಬೂಬಕರ್, ನಾನು ಕನಸಿನಲ್ಲಿ ಹೀಗೆ ಕಂಡೆನು. ನನಗೆ ಬೆಣ್ಣೆಯಿಂದ ತುಂಬಿಸಲಾದ ಒಂದು ಪಾತ್ರೆಯನ್ನು ನೀಡಲಾಯಿತು. ಆದರೆ ಒಂದು ಕೋಳಿ ಕೊಕ್ಕಿನಿಂದ ಕುಕ್ಕಿದಾಗ ಪಾತ್ರೆಯಲ್ಲಿದ್ದ ಬೆಣ್ಣೆಯೆಲ್ಲ ಸುರಿದುಹೋಯಿತು. ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ಇಂದು ನೀವು ಬಯಸುತ್ತಿರುವುದು ನಿಮಗೆ ಲಭಿಸುವುದು ಎಂದು ನನಗೆ ಅನಿಸುತ್ತಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೂ ಅದು ಲಭಿಸುವುದು ಎಂದು ಅನಿಸುತ್ತಿಲ್ಲ. ಸ್ವಲ್ಪ ಸಮಯದ ನಂತರ ಹಝ್ರತ್ ಉಮರ್(ರ) ಕೇಳಿದರು: ಜನರೊಡನೆ ಮರಳಿ ಹೋಗಲು ಘೋಷಿಸಲೇ? ಯಾಕಿಲ್ಲವೆಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಆಗ ಜನರೊಡನೆ ಮರಳಿಹೋಗಲು ಹಝ್ರತ್ ಉಮರ್(ರ) ಘೋಷಿಸುತ್ತಾ ಹೇಳಿದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪಉುಟ-793, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ತಬೂಕ್ ಯುದ್ಧ ಹಿಜರೀ 9, ರಜಬಿನಲ್ಲಿ ನಡೆದಿತ್ತು. ಈ ಕುರಿತು ಹೀಗೆ ವರದಿಯಿದೆ. ತಬೂಕ್ ಎಂಬುದು ಮದೀನದಿಂದ ಸಿರಿಯದ ಮುಖ್ಯಮಾರ್ಗದಲ್ಲಿ ಇರುವ ಪ್ರದೇಶವಾಗಿದೆ. ಅದು ವ್ಯಾಪಾರಿ ತಂಡಗಳು ಸಾಮಾನ್ಯವಾಗಿ ದಾಟಿಹೋಗುವ ಮಾರ್ಗವಾಗಿತ್ತು. ಇದು ವಾದಿಯುಲ್‌ಖುರಾ ಮತ್ತು ಸಿರಿಯದ ನಡುವೆ ಇರುವ ಒಂದು ಪಟ್ಟಣವಾಗಿದೆ. ಅದನ್ನು ಅಸ್‌ಹಾಬುಲ್ ಐಕದ ಪಟ್ಟಣವೆಂದೂ ಕರೆಯಲಾಗುತ್ತದೆ. ಐಕತ್ ಸಮುದಾಯದಲ್ಲಿ ಹಝ್ರತ್ ಶುಐಬ್(ಅ) ಪ್ರವಾದಿಯಾಗಿ ನಿಯೋಜಿತರಾಗಿದ್ದರು. (ಮುಅಜಮುಲ್ ಬಲದಾನ್, ಸಂಪುಟ-2, ಪುಟ-14, ದಾರ್ ಸಾದಿರ್ ಬೈರೂತ್ 1977)

ಹಝ್ರತ್ ಅಬೂಬಕರ್(ರ) ತಬೂಕ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗಿದ್ದರು. ತಬೂಕ್ ಯುದ್ಧದಲ್ಲಿ ದೊಡ್ಡ ಧ್ವಜವನ್ನು ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರಿಗೆ ನೀಡಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-131, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಅಬೂಬಕರ್(ರ) ತಬೂಕ್ ಯುದ್ಧದ ವೇಳೆ ತನ್ನ ಸಂಪೂರ್ಣ ಸಂಪತ್ತು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಸಮರ್ಪಿಸಿದ್ದರು. ಅದರ ಒಟ್ಟು ಬೆಲೆ 4 ಸಾವಿರ ದಿರ್ಹಂ ಆಗಿತ್ತು. (ಶರಹ್ ಅಲ್ಲಾಮ ಝುರ್‌ಖಾನಿ. ಸಂಪುಟ-4, ಪುಟ-69, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ತಬೂಕ್ ಯುದ್ಧದ ತಯಾರಿಗಾಗಿ ಆಜ್ಞಾಪಿಸಿದಾಗ, ಮಕ್ಕ ಮತ್ತು ಇತರ ಗೋತ್ರಗಳು ಸಹ ಅವರ ಜೊತೆಗೆ ಬರಲಿಕ್ಕಾಗಿ ಅವರ ಕಡೆಗೆ ಸಂದೇಶ ಕಳುಹಿಸಿದರು. ತಮ್ಮ ಸಂಪತ್ತನ್ನು

ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಹಝ್ರತ್ ಪೈಗಂಬರ್(ಸ) ಶ್ರೀಮಂತರನ್ನು ಹುರಿದುಂಬಿಸಿದರು. ಹಝ್ರತ್ ಪೈಗಂಬರ್(ಸ) ಧನತ್ಯಾಗ ಮಾಡಲು ಅವರಿಗೆ ತಾಕೀತು ಮಾಡಿದರು. ಇದು ಹಝ್ರತ್ ಪೈಗಂಬರ್(ಸ) ಮಾಡಿದ ಕೊನೆಯ ಯುದ್ಧವಾಗಿತ್ತು. ಈ ಸಂದರ್ಭದಲ್ಲಿ ಮೊತ್ತಮೊದಲು ಸಂಪತ್ತನ್ನು ತೆಗೆದುಕೊಂಡು ಬಂದ ವ್ಯಕ್ತಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಅವರು ತನ್ನ ಮನೆಯ ಎಲ್ಲ ಸಂಪತ್ತನ್ನು ತೆಗೆದುಕೊಂಡು ಬಂದರು. ಅದು 4 ಸಾವಿರ ದಿರ್ಹಂ ಆಗಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರೊಡನೆ ಕೇಳಿದರು: ನಿಮ್ಮ ಮನೆಯವರಿಗಾಗಿ ಏನಾದರೂ ಬಿಟ್ಟುಬಂದಿದ್ದೀಯ? ಆಗ ಅವರು ಹೇಳಿದರು: ಮನೆಯವರಿಗೆ ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಬಿಟ್ಟುಬಂದಿದ್ದೇನೆ.

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ತನ್ನ ಮನೆಯ ಅರ್ಧ ಸಂಪತ್ತನ್ನು ತೆಗೆದುಕೊಂಡು ಬಂದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಕೇಳಿದರು: ನಿಮ್ಮ ಮನೆಯವರಿಗಾಗಿ ಏನಾದರೂ ಬಿಟ್ಟುಬಂದಿದ್ದೀಯ? ಆಗ ಅವರು ಹೇಳಿದರು: ಅರ್ಧ ಸಂಪತ್ತನ್ನು ಬಿಟ್ಟುಬಂದಿದ್ದೇನೆ. ಈ ಸಂದರ್ಭದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನೂರು ಔಖಿಯ ನಾಣ್ಯಗಳನ್ನು ಸಮರ್ಪಿಸಿದರು. ಅದು ಸುಮಾರು 4 ಸಾವಿರ ದಿರ್ಹಂ ಆಗಿತ್ತು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್ ಭೂಮಿಯಲ್ಲಿರುವ ಭಂಡಾರಗಳಲ್ಲಿ ಇರುವ ಎರಡು ಭಂಡಾರಗಳಾಗಿವೆ. ಅವರು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ಅವರು ಬಹಳಷ್ಟು ಸಂಪತ್ತು ನೀಡಿರುವರು. ಈ ಸಂದರ್ಭದಲ್ಲಿ ಮಹಿಳೆಯರು ಕೂಡ ತಮ್ಮ ಆಭರಣಗಳನ್ನು ಸಮರ್ಪಿಸಿದರು. ಹಝ್ರತ್ ಆಸಿಮ್ ಬಿನ್ ಅದ್ದಿ(ರ) ಸುಮಾರು ಒಂದುವರೆ ಸಾವಿರ ಕಿಲೋ ಖರ್ಜೂರಗಳನ್ನು ಸಮರ್ಪಿಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ-3, ಪುಟ-183-184, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಲುಗಾತುಲ್ ಹದೀಸ್, ಸಂಪುಟ-1, ಪುಟ-82) (ಲುಗಾತುಲ್ ಹದೀಸ್, ಸಂಪುಟ-4, ಪುಟ-487, ಸಂಪುಟ-2, ಪುಟ-648)

ಝೈದ್ ಬಿನ್ ಅಸ್ಲಮ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೀಗೆ ಹೇಳುವುದನ್ನು ನಾನು ಆಲಿಸಿದೆ. ಅವರು ಹೇಳಿದರು: ಒಂದು ಬಾರಿ ಹಝ್ರತ್ ಪೈಗಂಬರ್(ಸ) ನಮ್ಮೊಡನೆ ಸದಖ ಮಾಡಲು ಹೇಳಿದರು. ಆಗ ನನ್ನ ಬಳಿ ಸಂಪತ್ತು ಇತ್ತು. ಇಂದು ನಾನು ಅಬೂಬಕ್ರ್‌ಗಿಂತ ಮಿಗಿಲಾಗುವೆನು ಎಂದು ಭಾವಿಸಿದ್ದೆ. ಆದರೆ ಇಂದಿನ ತನಕ ಅವರಿಗಿಂತ ಮಿಗಿಲಾಗಲು ನನಗೆ ಸಾಧ್ಯವಾಗಿಲ್ಲ. ನಾನು ನನ್ನ ಬಳಿಯಿದ್ದ ಸಂಪತ್ತಿನ ಅರ್ಧದಷ್ಟನ್ನು ತಂದೆನು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಕೇಳಿದರು: ನೀನು ನಿನ್ನ ಮನೆಯವರಿಗಾಗಿ ಏನು ಬಿಟ್ಟುಬಂದಿದ್ದೀಯ? ತಂದದ್ದಷ್ಟನ್ನೇ ಮನೆಯಲ್ಲಿ ಬಿಟ್ಟುಬಂದೆ ಎಂದು ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಅಬೂಬಕರ್(ರ) ಅವರ ಬಳಿಯಿದ್ದ ಎಲ್ಲವನ್ನು ಕೊಂಡುಬಂದರು. ಆಗ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೀಗೆ ಕೇಳಿದರು: ಹೇ ಅಬೂಬಕ್ರ್, ಮನೆಯವರಿಗಾಗಿ ಏನು ಬಿಟ್ಟುಬಂದಿದ್ದೀಯ? ಅವರು ಹೇಳಿದರು: ನಾನು ಅವರಿಗಾಗಿ ಅಲ್ಲಾಹ್ ಮತ್ತು ಪ್ರವಾದಿಯನ್ನು ಬಿಟ್ಟು ಬಂದಿದ್ದೇನೆ.

ಹಝ್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ನಾನು ಅವರಿಗಿಂತ ಯಾವುದೇ ಸಂಗತಿಯಲ್ಲಿ ಮಿಗಿಲಾಗಲು ಸಾಧ್ಯವಲ್ಲ. (ಸನನ್ ಅತ್ತಿರ್‌ಮಿಝಿ, ಕಿತಾಬುಲ್ ಮಗಾಝಿ, ಹದೀಸ್-3675)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅದೊಂದು ಕಾಲವಾಗಿತ್ತು. ದೈವಿಕ ಧರ್ಮಕ್ಕಾಗಿ, ದೀನಿಗಾಗಿ ಜನರು ತಮ್ಮ ಜೀವಗಳನ್ನು ಆಡುಕುರಿಗಳಂತೆ ತ್ಯಾಗಮಾಡುತ್ತಿದ್ದರು. ಸಂಪತ್ತಿನ ಬಗ್ಗೆ ಏನು ಹೇಳಲಿ. ಹಝ್ರತ್ ಅಬೂಬಕರ್(ರ) ಒಂದಕ್ಕಿಂತ ಹೆಚ್ಚು ಬಾರಿ ತನ್ನ ಮನೆಯಲ್ಲಿದ್ದ ಎಲ್ಲವನ್ನು, ಸೂಜಿಯನ್ನು ಕೂಡ ಮನೆಯಲ್ಲಿ ಇರಿಸದೇ ತ್ಯಾಗ ಮಾಡಿದರು. ಅದೇ ರೀತಿಯಲ್ಲಿ ಹಝ್ರತ್ ಉಮರ್(ರ) ಸಹ ತನ್ನ ಸಾಮರ್ಥ್ಯ ಮತ್ತು ದಾನಶೀಲತೆ ಪ್ರಕಾರ, ಹಝ್ರತ್ ಉಸ್ಮಾನ್(ರ) ತನ್ನ ಶಕ್ತಿ ಮತ್ತು ಸಾಂಪತ್ತಿಕ ನೆಲೆ ಪ್ರಕಾರ, ಹಝ್ರತ್ ಅಲಿ(ರ) ತನ್ನ ಸಾಮರ್ಥ್ಯದಂತೆ, ಅದೇ ರೀತಿಯಲ್ಲಿ ಎಲ್ಲ ಸಹಾಬಿಯರು ತಮ್ಮ ಜೀವಗಳ ಮತ್ತು ಸಂಪತ್ತುಗಳ ಸಮೇತ ಈ ದೈವಿಕ ದೀನಿಗಾಗಿ ತ್ಯಾಗ ಮಾಡಲು ಸಿದ್ಧರಾದರು. ಹಝ್ರತ್ ಮಸೀಹ್ ಮೌಊದ್(ಅ) ಮಾತನ್ನು ಮುಂದುವರೆಸುತ್ತಾ ಬೈಅತ್ ಮಾಡಿದವರ ಕುರಿತು ಹೇಳುತ್ತಾರೆ: ಮತ್ತೊಂದೆಡೆ, ಕೆಲವರು ಬೈಅತ್ ಮಾಡುತ್ತಾರೆ, ನಾವು ದೀನಿಗೆ ಲೌಕಿಕತೆಗಿಂತ ಪ್ರಾಮುಖ್ಯತೆ ಮತ್ತು ಆದ್ಯತೆಯನ್ನು ನೀಡುವೆವು ಎಂದು ಪ್ರತಿಜ್ಞೆ ಕೂಡ ಮಾಡುತ್ತಾರೆ. ಆದರೆ ಸಹಾಯದ ಆವಶ್ಯಕತೆಯಿರುವ ಸಮಯದಲ್ಲಿ ತಮ್ಮ ಜೇಬುಗಳನ್ನು ಅದುಮಿ ಹಿಡಿದಿರುತ್ತಾರೆ. ಲೌಕಿಕತೆಯೊಂದಿಗೆ ಇಂತಹ ಪ್ರೀತಿ ಇರಿಸಿದರೆ, ಧಾರ್ಮಿಕ ಉದ್ದೇಶ ಗಳಿಸಲು ಸಾಧ್ಯವೇ? ಇಂತಹ ಜನರು ಯಾವುದೇ ರೀತಿಯಲ್ಲಿ ಪ್ರಯೋಜನಕಾರಿಯಾಗಲು ಸಾಧ್ಯವೇ? ಖಂಡಿತವಿಲ್ಲ, ಖಂಡಿತವಾಗಿಯೂ ಇಲ್ಲ. **ಲನ್‌ತನಾಲು ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್** ಎಂದು ಅಲ್ಲಾಹನು ಹೇಳುತ್ತಾನೆ. ಎಂದರೆ, ನೀವು ಪ್ರೀತಿಸುವ ಸಂಪತ್ತನ್ನು ಧರ್ಮದ ಮಾರ್ಗದಲ್ಲಿ ಖರ್ಚು ಮಾಡುವ ವರೆಗೆ ನಿಮ್ಮ ಸತ್ಕರ್ಮ ಮತ್ತು ಒಳಿತುಗಳು ಸತ್ಕರ್ಮಗಳಲ್ಲ. (ಮಲ್‌ಫೂಝಾತ್, ಸಂಪುಟ-6, ಪುಟ-40, ಅಡಿಟಿಪ್ಪಣಿ)

ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಜೊತೆಗೂಡಿ ಸಹಾಬಿಯೊಬ್ಬರ ಮೃತದೇಹವನ್ನು ದಫನ್ ಮಾಡಿದ ಒಂದು ಪ್ರಸ್ತಾಪವಿದೆ. ಈ ಕುರಿತು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ನಾನು ತಬೂಕ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗಿದ್ದೆ. ಒಂದು ಬಾರಿ ನಾನು ಅರ್ಧರಾತ್ರಿ ಸಮಯದಲ್ಲಿ ಎದ್ದೆನು. ಆಗ ಸೈನ್ಯದ ಒಂದು ಕಡೆ ಬೆಂಕಿಯ ಬೆಳಕು ಕಂಡೆನು. ಏನಾಗುತ್ತಿದೆ ಎಂದು ನೋಡಲು ನಾನು ಅಲ್ಲಿಗೆ ಹೋದೆನು. ಅಲ್ಲಿ ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಕಂಡೆನು. ಹಝ್ರತ್ ಅಬ್ದುಲ್ಲಾಹ್ ಧುಲ್‌ಬಜಾದೈನ್ ಮುಝ್ನಿ ನಿಧನರಾಗಿದ್ದರು. ಮೂವರು ಸೇರಿ ಅವರಿಗಾಗಿ ಖಬರನ್ನು ಅಗೆದು ತಯಾರಿ ಮಾಡಿಯಾಗಿತ್ತು. ಹಝ್ರತ್ ಪೈಗಂಬರ್(ಸ) ಖಬರಿನ ಒಳಗೆ ಇದ್ದರು. ಆಗ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಮೃತಶರೀರವನ್ನು ಹಝ್ರತ್ ಪೈಗಂಬರ್(ಸ) ಕಡೆಗೆ ಇಳಿಸಿಕೊಡುತ್ತಿದ್ದರು. ನೀವಿಬ್ಬರೂ ನಿಮ್ಮ ಸಹೋದರನನ್ನು ನನ್ನ ಸಮೀಪಕ್ಕೆ ತನ್ನರಿ ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು. ಹೀಗೆ ಅವರಿಬ್ಬರೂ ಹಝ್ರತ್ ಅಬ್ದುಲ್ಲಾಹ್ ಧುಲ್‌ಬಜಾದೈನ್(ರ)ರ ಮಯ್ಯತ್ತನ್ನು ಹಝ್ರತ್ ಪೈಗಂಬರ್(ಸ) ಕಡೆಗೆ ಇಳಿಸುತ್ತಿದ್ದರು. ಅವರ ಮಯ್ಯತನ್ನು ಖಬರಿನಲ್ಲಿ ಇರಿಸಿದ ನಂತರ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಇನ್ನೀ ಅಮ್‌ಸಿಯತು ರಾಝಿಯನ್ ಅನ್‌ಹು ಫಾರಿಝ್ ಅನ್‌ಹು.** ಎಂದರೆ, ಯಾ ಅಲ್ಲಾಹ್, ನಾನು ಅವರೊಡನೆ ಸಂಪ್ರೀತನಾದ ಸ್ಥಿತಿಯಲ್ಲಿ ಅವರೊಂದಿಗೆ ದಿನವನ್ನು ಕಳೆದೆನು. ಆದ್ದರಿಂದ ನೀನು ಸಹ ಅವರೊಂದಿಗೆ ಸಂಪ್ರೀತನಾಗು.

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಹೇಳುತ್ತಾರೆ: ಈ ಖಬರಿನಲ್ಲಿ ಇರುವ ವ್ಯಕ್ತಿ ನಾನಾಗಿದ್ದರೆ ಎಷ್ಟು ಚೆನ್ನಾಗಿತ್ತು! ಎಂದು ನಾನು ಆ ಸಮಯದಲ್ಲಿ ಆಶಿಸುತ್ತಿದ್ದೆ. (ಸೀರತ್ ಇಬ್ನೆ ಹಿಶ್ಶಾಮ್, ಪುಟ-822, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಹಝ್ರತ್ ಅಬ್ದುಲ್ಲಾಹ್ ಬಿನ್ ಧುಲ್‌ಬಜಾದೈನ್‌ರ ಸಂಬಂಧ ಬನೂ ಮುಝೀನ ಗೋತ್ರದೊಂದಾಗಿತ್ತು. ಅವರ ಚಿಕ್ಕಂದಿನಲ್ಲೇ ಅವರ ತಂದೆ ಮೃತಪಟ್ಟಿದ್ದರು. ಅವರಿಗೆ ವಾರಸು ಹಕ್ಕಾಗಿ ಏನೂ ಲಭಿಸಲಿಲ್ಲ. ಅವರ ಚಿಕ್ಕಪ್ಪ ಶ್ರೀಮಂತರಾಗಿದ್ದರು. ಅವರ ಚಿಕ್ಕಪ್ಪ ಅವರ ಪಾಲನೆಪೋಷಣೆ ಮಾಡುತ್ತಿದ್ದರು. ಕೊನೆಗೆ ಅವರೂ ಶ್ರೀಮಂತರಾದರು. ಅವರು ಮಕ್ಕಾ ವಿಜಯದ ನಂತರ ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ಆಗ ಅವರ ಚಿಕ್ಕಪ್ಪ ಅವರಿಂದ ವಸ್ತ್ರಗಳ ಸಮೇತ ಎಲ್ಲ ಸಂಪತ್ತನ್ನು ಮರಳಿ ಪಡೆದರು. ಅನಂತರ ಅವರ ತಾಯಿ ಬಂದು ತನ್ನ ಹೊದಿಕೆಯನ್ನು ಎರಡಾಗಿ ಕತ್ತರಿಸಿ ಅವರಿಗೆ ಕೊಟ್ಟರು. ಹಝ್ರತ್ ಅಬ್ದುಲ್ಲಾಹ್ ಅದರ ಒಂದು ಭಾಗವನ್ನು ಲುಂಗಿಯಾಗಿಯೂ ಮತ್ತೊಂದು ಭಾಗವನ್ನು ತನ್ನ ಮೈಯ ಮೇಲೂ ಹಾಕಿಕೊಂಡರು. ಅನಂತರ ಅವರು ಮದೀನಕ್ಕೆ ಬಂದು ಮಸೀದಿಯಲ್ಲಿ ಮಲಗಿದರು. ಅನಂತರ ಹಝ್ರತ್ ಪೈಗಂಬರ್(ಸ)ರೊಂದಿಗೆ ಬೆಳಿಗ್ಗೆ ಫಜ್ರ್ ನಮಾಝ್ ನಿರ್ವಹಿಸಿದರು. ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಫಜ್ರ್ ನಮಾಝಿನ ನಂತರ, ಯಾರಾದರೂ ಹೊಸಬರು ಬಂದಿರುವರೇ ಎಂದು ಅರಿಯಲು ಗಮನವಿಟ್ಟು ನೋಡುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ದುಲ್ಲಾಹ್(ರ)ರನ್ನು ಕಂಡರು. ಪರಿಚಯವಿಲ್ಲದ ಕಾರಣದಿಂದ ನೀವು ಯಾರೆಂದು ಕೇಳಿದರು. ಆಗ ಹಝ್ರತ್ ಅಬ್ದುಲ್ಲಾಹ್ ತನ್ನ ಕುಟುಂಬದ ಪರಿಚಯ ಮಾಡಿಸಿಕೊಟ್ಟರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಅವರು ಹೇಳಿದರು: ನನ್ನ ಹೆಸರು ಅಬ್ದುಲ್‌ಅಝ್ಝೀ ಎಂದಾಗಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಅಬ್ದುಲ್ಲಾಹ್ ಧುಲ್‌ಬಜಾದೈನ್ ಆಗಿರುವಿರಿ. ಎಂದರೆ ಎರಡು ಹೊದಿಕೆಯುಳ್ಳವನು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ನನ್ನ ಬಳಿಯೇ ಇರು. ಹೀಗೆ ಅವರು ಹಝ್ರತ್ ಪೈಗಂಬರ್(ಸ)ರ ಅತಿಥಿಗಳಲ್ಲಿ ಒಬ್ಬರಾದರು. ಹಝ್ರತ್ ಪೈಗಂಬರ್(ಸ) ಅವರಿಗೆ ಪವಿತ್ರ ಖುರ್‌ಆನ್ ಕಲಿಸಿ ಕೊಡುತ್ತಿದ್ದರು. ಹೀಗೆ ಅವರು ಬಹುತೇಕ ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದರು. ಅವರು ಉಚ್ಚಸ್ವರವುಳ್ಳ ವ್ಯಕ್ತಿಯಾಗಿದ್ದರು. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-5, ಪುಟ-459-460, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಅಸದುಲ್‌ಗಾಬ, ಸಂಪುಟ-3, ಪುಟ-229, ದಾರುಲ್ ಕುತುಬ್ ಇಲ್‌ಮಿಯ)

ಹಜ್ಜಿನ ಸಮಯದಲ್ಲಿ ಹಝ್ರತ್ ಅಬೂಬಕರ್(ರ)ರ ನೇತೃತ್ವದ ಬಗ್ಗೆ ಪ್ರಸ್ತಾಪವಿದೆ. ಹಝ್ರತ್ ಪೈಗಂಬರ್(ಸ) ಹಿಜರೀ 9ರಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರನ್ನು ಅಮೀರುಲ್ ಹಜ್ಜ್ ಆಗಿ ನೇಮಿಸಿಕೊಂಡು ಮಕ್ಕಕ್ಕೆ ಕಳುಹಿಸಿದ್ದರು. ಈ ಕುರಿತು ವಿವರಣೆ ಏನೆಂದರೆ, ಹಝ್ರತ್ ಪೈಗಂಬರ್(ಸ) ತಬೂಕಿನಿಂದ ಮರಳಿ ಬಂದಾಗ, ಅವರು ಹಜ್ಜ್ ಮಾಡಲು ನಿರ್ಧರಿಸಿದರು. ಬಹುದೇವಾರಾಧಕರು ಇತರ ಜನರೊಂದಿಗೆ ಸೇರಿಕೊಂಡು ಹಜ್ಜ್ ಮಾಡುತ್ತಾರೆ ಎಂದು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಲಾಯಿತು. ಅಲ್ಲಿ ಬಹುದೇವಾರಾಧಕರು ಕೂಡ ಇರುತ್ತಿದ್ದರು. ಶಿರ್ಕಿನ ಪದಗಳನ್ನು ಸಹ ಉಪಯೋಗಿಸುತ್ತಿದ್ದರು ಮತ್ತು ಬರೀ ಮೈಯಲ್ಲಿ ತವಾಫ್ ಮಾಡುತ್ತಿದ್ದರು. ಈ ಮಾತನ್ನು ಕೇಳಿ ಹಝ್ರತ್ ಪೈಗಂಬರ್(ಸ)

ಆ ವರ್ಷ ಹಜ್ಜ್ ಮಾಡುವ ನಿರ್ಧಾರವನ್ನು ಕೈಬಿಟ್ಟರು ಮತ್ತು ಹಝ್ರತ್ ಅಬೂಬಕರ್(ರ)ರನ್ನು ಹಜ್ಜಿನ ಅಮೀರ್‌ರನ್ನಾಗಿ ಮಾಡಿ ಕಳುಹಿಸಿದರು.
(ಅರ್‌ರೌಝುಲ್ ಉನ್ಫ್ ಫೀ ತಫ್ಸೀರ್ ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಸಂಪುಟ–4, ಪುಟ–318–319, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಉಮ್ದತುಲ್ ಖಾರಿ, ಕಿತಾಬುಲ್ ಹಜ್ಜ್, ಸಂಪುಟ–9, ಪುಟ–384, ದಾರ್ ಅಹ್ಯಾಉತ್ತುರಾಸ್ 2003)

ಹಝ್ರತ್ ಅಬೂಬಕರ್(ರ) 300 ಸಹಾಬಿಯರ ಜೊತೆಗೆ ಮದೀನದಿಂದ ಹೊರಟರು. ಹಝ್ರತ್ ಪೈಗಂಬರ್(ಸ) ಅವರ ಜೊತೆಗೆ 20 ಖುರ್ಬಾನಿಯ ಜಾನುವಾರುಗಳನ್ನು ಬಿಟ್ಟರು. ಅವುಗಳ ಕೊರಳುಗಳಿಗೆ ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ಕೈಗಳಿಂದ ಖುರ್ಬಾನಿಯ ಗುರುತು ಎಂಬ ರೀತಿಯಲ್ಲಿ ಕೊರಳಪಟ್ಟಿಯನ್ನು ಕಟ್ಟಿದ್ದರು ಮತ್ತು ಗುರುತು ಹಾಕಿದ್ದರು. ಹಝ್ರತ್ ಅಬೂಬಕರ್(ರ) ಸ್ವತಃ ತನ್ನ ಜೊತೆಗೆ ಖುರ್ಬಾನಿಯ ಐದು ಜಾನುವಾರುಗಳನ್ನು ತೆಗೆದುಕೊಂಡು ಹೋಗಿದ್ದರು.
(ಅಸ್ಸೀರತುಲ್ ಹಲಬೀಯ, ಸಂಪುಟ–3, ಪುಟ–295, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಹಝ್ರತ್ ಅಲಿ(ರ) ಸೂರಃ ತೌಬದ ಆರಂಭದ ಕೆಲವು ವಚನಗಳನ್ನು ಹಜ್ಜಿನ ಸಂದರ್ಭದಲ್ಲಿ ಓದಿಹೇಳಿದ್ದರು ಎಂದು ವರದಿಯಾಗಿದೆ. ಈ ವರದಿ ಹೀಗಿದೆ: ಅಬೂಜಾಫರ್ ಬಿನ್ ಮುಹಮ್ಮದ್ ಬಿನ್ ಅಲಿಯರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ)ರ ಮೇಲೆ ಸೂರಾ ತೌಬಃ ಅವತೀರ್ಣವಾದಾಗ ಅವರು ಹಝ್ರತ್ ಅಬೂಬಕರ್(ರ)ರನ್ನು ಹಜ್ಜಿನ ಅಮೀರ್ ಆಗಿ ಕಳುಹಿಸಿದರು. ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಲಾಯಿತು: ಯಾ ರಸೂಲಲ್ಲಾಹ್, ಹಜ್ಜಿನ ಸಂದರ್ಭದಲ್ಲಿ ಅಲ್ಲಿ ಓದಿ ಹೇಳಲಿಕ್ಕಾಗಿ ಈ ಸೂರತನ್ನು ಹಝ್ರತ್ ಅಬೂಬಕರ್(ರ)ರಿಗೆ ಕಳುಹಿಸಿ ಕೊಡಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಅಹ್ಲೇ ಬೈತ್, ಎಂದರೆ ನನ್ನ ಕುಟುಂಬ, ನನ್ನ ಮನೆತನದ ಯಾರಾದರೂ ಅಲ್ಲದೇ ಬೇರೆ ಯಾರೂ ಈ ಕರ್ತವ್ಯವನ್ನು ನನ್ನ ಪರವಾಗಿ ನೆರವೇರಿಸಲು ಸಾಧ್ಯವಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ಕರೆದರು ಮತ್ತು ಅವರೊಡನೆ ಹೇಳಿದರು: ಸೂರಃ ತೌಬದ ಆರಂಭದ ವಚನಗಳನ್ನು ತೆಗೆದುಕೊಂಡು ಹೋಗು ಮತ್ತು ಖುರ್ಬಾನಿಯ ದಿವಸ ಮಿನಾದಲ್ಲಿ ಎಲ್ಲರೂ ಒಟ್ಟುಸೇರುವಾಗ ಹೀಗೆ ಇದನ್ನು ಘೋಷಿಸು: ಸ್ವರ್ಗದಲ್ಲಿ ಯಾವನೇ ಸತ್ಯನಿಷೇಧಿ ಪ್ರವೇಶಿಸಲಾರನು, ಈ ವರ್ಷದ ನಂತರ ಯಾವನೇ ಬಹುದೇವಾರಾಧಕನಿಗೆ ಹಜ್ಜ್ ಮಾಡುವ ಅನುಮತಿ ಇಲ್ಲ. ನಗ್ನವಾಗಿ ಬೈತುಲ್ಲಾಹ್ ಆದ ಕಅ್‌ಬ ಭವನದಲ್ಲಿ ತವಾಫ್ ಮಾಡಲು ಯಾರಿಗೂ ಅನುಮತಿಯಿಲ್ಲ. ಯಾರೊಡನೆ ಹಝ್ರತ್ ಪೈಗಂಬರ್(ಸ) ಯಾವುದಾದರೂ ಒಪ್ಪಂದ ಮಾಡಿರುವರಾದರೆ, ಅದರ ಕಾಲಾವಧಿಯನ್ನು ಪೂರ್ತಿಗೊಳಿಸಲಾಗುವುದು.

ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ಹಝ್ರತ್ ಪೈಗಂಬರ್(ಸ)ರ ಒಂಟೆಯಾದ ಅಝ್‌ಬದ ಮೇಲೆ ಸವಾರರಾಗಿ ರವಾನೆಯಾಗಿದ್ದರು. ಮಾರ್ಗದಲ್ಲೇ ಹಝ್ರತ್ ಅಬೂಬಕರ್(ರ)ರನ್ನು ಭೇಟಿಯಾದರು. ಅವರಿಬ್ಬರ ಭೇಟಿ ಅರಜ್ ಅಥವಾ ಝುಜ್‌ನಾನ್ ಕಣಿವೆಯಲ್ಲಿ ಆಗಿತ್ತು. ಅರಜ್ ಎಂಬುದು ಮಕ್ಕ ಮತ್ತು ಮದೀನದ ಮಾರ್ಗ ಮಧ್ಯೆ ಇರುವ ಒಂದು ಕಣಿವೆಯಾಗಿದೆ. ಇಲ್ಲಿ ಯಾತ್ರಾ ತಂಡಗಳು ತಂಗುತ್ತವೆ. ಝುಜ್‌ನಾನ್ ಮದೀನದ ಮಾರ್ಗದಲ್ಲಿ ಮಕ್ಕದ ಆಸುಪಾಸಿನಲ್ಲಿರುವ ಒಂದು ಪ್ರದೇಶವಾಗಿದೆ. ಅದು ಮಕ್ಕದಿಂದ 25 ಮೈಲುಗಳ ದೂರದಲ್ಲಿದೆ. ಹೇಗಿದ್ದರೂ ಹಝ್ರತ್ ಅಬೂಬಕರ್(ರ) ಹಝ್ರತ್ ಅಲಿ(ರ)ರನ್ನು ಮಾರ್ಗದಲ್ಲಿ ನೋಡಿದಾಗ, ಹಝ್ರತ್ ಅಲಿ(ರ) ಹೇಳಿದರು: ನಿಮ್ಮನ್ನು ಅಮೀರ್‌ರನ್ನಾಗಿ ನೇಮಿಸಲಾಗಿದೆ. ಹಝ್ರತ್ ಅಬೂಬಕರ್(ರ) ಜನರ ಹಜ್ಜಿನ ವಿಷಯಗಳ ಮೇಲ್ನೋಟವಹಿಸಿದರು. ಇಸ್ಲಾಮಿಗೆ ಮುಂಚೆ ತಂಗುತ್ತಿದ್ದ ಅದೇ ಜಾಗಗಳಲ್ಲಿ ಆ ವರ್ಷವೂ ಅರಬ್ ನಿವಾಸಿಗಳು ತಂಗಿದರು.

ಖುರ್ಬಾನಿಯ ದಿನ ಬಂದಾಗ, ಹಝ್ರತ್ ಅಲಿ(ರ) ನಿಂತುಕೊಂಡು ಹಝ್ರತ್ ಪೈಗಂಬರ್(ಸ) ಆದೇಶಿಸಿದ ಸಂಗತಿಯನ್ನು ಘೋಷಿಸುತ್ತಾ ಹೀಗೆ ಹೇಳಿದರು: ಸ್ವರ್ಗದಲ್ಲಿ ಯಾವನೇ ಸತ್ಯನಿಷೇಧಿ ಪ್ರವೇಶಿಸಲಾರನು, ಈ ವರ್ಷದ ನಂತರ ಯಾವನೇ ಬಹುದೇವಾರಾಧಕನಿಗೆ ಹಜ್ಜ್ ಮಾಡುವ ಅನುಮತಿ ಇಲ್ಲ ಮತ್ತು ನಗ್ನವಾಗಿ ಬೈತುಲ್ಲಾಹ್ ಆದ ಕಅ್‌ಬ ಭವನದಲ್ಲಿ ತವಾಫ್ ಮಾಡಲು ಯಾರಿಗೂ ಅನುಮತಿಯಿಲ್ಲ. ಯಾರೊಡನೆ ಹಝ್ರತ್ ಪೈಗಂಬರ್(ಸ) ಯಾವುದಾದರೂ ಒಪ್ಪಂದ ಮಾಡಿರುವರಾದರೆ, ಅದರ ಕಾಲಾವಧಿಯನ್ನು ಪೂರ್ತಿಗೊಳಿಸಲಾಗುವುದು. ಪ್ರತಿಯೊಂದು ಸಮುದಾಯ ತನ್ನ ಅಭಯಕೇಂದ್ರಗಳಿಗೆ ಮತ್ತು ತಮ್ಮ ತಮ್ಮ ಪ್ರದೇಶಗಳಿಗೆ ಮರಳಿಹೋಗುವಂತಾಗಲು ಜನರಿಗೆ ಈ ಘೋಷಣೆಯ ದಿನದಿಂದ ನಾಲ್ಕು ತಿಂಗಳುಗಳ ಕಾಲಾವಧಿಯನ್ನು ನೀಡಲಾಯಿತು. ಹಝ್ರತ್ ಪೈಗಂಬರ್(ಸ)ರ ಬಳಿ ಒಂದು ನಿರ್ದಿಷ್ಟ ಕಾಲಾವಧಿಯ ವರೆಗೆ ಒಪ್ಪಂದವಿರುವ ಜನರು ಹೊರತುಪಡಿಸಿ ಬೇರೆ ಯಾವನೇ ಮುಶ್ರಿಕನಿಗಾಗಿ ಯಾವುದೇ ಹೊಸ ಒಪ್ಪಂದ ಮಾಡಲಾಗದು. ಹಝ್ರತ್ ಪೈಗಂಬರ್(ಸ)ರೊಡನೆ ಮಾಡಲಾದ ಒಪ್ಪಂದದ ಕಾಲಾವಧಿ ಮುಗಿಯುವ ವರೆಗೆ ಕಾಯಲಾಗುವುದು. ಆ ವರ್ಷದ ನಂತರ ಯಾವನೇ ಮುಶ್ರಿಕನು ಹಜ್ಜ್ ಮಾಡಲಿಲ್ಲ. ಅದೇ ರೀತಿಯಲ್ಲಿ ಯಾರೂ ಬರೀಮೈಯಲ್ಲಿ ತವಾಫ್ ಮಾಡಲಿಲ್ಲ.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಅಬೂಬಕರ್(ರ) ಅರಫದ ಮೈದಾನಕ್ಕೆ ಬಂದರು. ಅವರು ಜನರನ್ನು ಸಂಬೋಧಿಸಿ ಮಾತನಾಡಿದರು. ತನ್ನ ಮಾತುಗಳನ್ನು ಕೊನೆಗೊಳಿಸಿದ ನಂತರ ಅವರು ನನ್ನ ಕಡೆಗೆ ನೋಡುತ್ತಾ ಹೇಳಿದರು: ಹೇ ಅಲೀ, ನಿಂತುಕೊಂಡು ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ತಲುಪಿಸು. ಆಗ ನಾನು ನಿಂತುಕೊಂಡು ಸೂರ ತೌಬಃದ ನಲ್ವತ್ತು ವಚನಗಳನ್ನು ಓದಿಹೇಳಿದೆ. ಅನಂತರ ಹಝ್ರತ್ ಅಲಿ(ರ) ಮತ್ತು ಹಝ್ರತ್ ಅಬೂಬಕರ್(ರ) ಇಬ್ಬರೂ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು.
(ಸೀರತ್ ಇಬ್ನೆ ಹಿಶ್ಯಾಮ್, ಪುಟ–832, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001) (ಸಬ್ಲುಲ್ ಹುದಾ, ಸಂಪುಟ–12, ಪುಟ–73, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಭಾಗ–7, ಪುಟ–228–229, ದಾರ್ ಹಿಜರ್ 1997) (ಮುಜಮುಲ್ ಬಲದಾನ್, ಸಂಪುಟ–3, ಪುಟ–515, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಫರ್ಹಂಗ್ ಸೀರತ್, ಪುಟ–198, ಝುವಾರ ಅಕಾಡಮಿ ಕರಾಚಿ 2003)

ಈ ಪ್ರಸ್ತಾಪ ಮುಂದುವರೆಯುವುದು. ಈಗ ನಾನು ದಿವಂಗತೆ ಮಹಿಳೆಯೊಬ್ಬರ ಬಗ್ಗೆ ಪ್ರಸ್ತಾಪಿಸುವೆನು. ಕೆಲವು ದಿನಗಳ ಹಿಂದೆ ನಿಧನರಾದರು. ಅವರ ಜನಾಝ ನಮಾಝ್ ಕೂಡ ನಿರ್ವಹಿಸುವೆನು.

ಸನ್ಮಾನ್ಯ ಅಮತುಲ್ಲತೀಫ್ ಖುರ್‌ಶೀದ್ ಸಾಹಿಬ. ಇವರು ಕೆನಡದಲ್ಲಿ ನೆಲೆಸಿದ್ದರು. ಇವರು ಕೆನಡದಲ್ಲಿ ಇದ್ದರು ಮತ್ತು ಅಲ್‌ಫಝ್ಲ್ ರಬ್ವದ ಅಸಿಸ್ಟೆಂಟ್ ಎಡಿಟರ್ ಆಗಿದ್ದ ದಿವಂಗತ ಶೇಖ್ ಖುರ್‌ಶಿದ್ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು. 95ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದವರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯರಾದ ಹಝ್ರತ್ ಮಿಯಾಂ ಫಝ್ಲ್ ಮುಹಮ್ಮದ್ ಹರ್‌ಸಿಯಾನ್ ಮತ್ತು ಹಝ್ರತ್ ಹಕೀಂ ಅಲ್ಲಾಹ್ ಬಕ್ಷ್ ಸಾಹಿಬ್‌ರ ಮೊಮ್ಮಗಳೂ ಹಾಗೂ ಸನ್ಮಾನ್ಯ ಮಿಯಾ ಅಬ್ದುರ್ರಹೀಂ ದಿಯಾನತ್ ಸಾಹಿಬ್ ದರ್‌ವೇಶ್ ಮತ್ತು ಆಮಿನ ಬೇಗಂ ಸಾಹಿಬರ ಹಿರಿಯ ಮಗಳಾಗಿದ್ದರು. ನುಸ್ರತ್ ಗರ್ಲ್ಸ್ ಹೈಸ್ಕೂಲ್ ಖಾದಿಯಾನಿನಿಂದ ಅವರು ಮಿಡಲ್ ಪಾಸ್ ಮಾಡಿದ ನಂತರ ಜಾಮಿಅ ನುಸ್ರತ್‌ನಲ್ಲಿ 1944ರಲ್ಲಿ ಪ್ರವೇಶನ ಪಡೆದರು. ಅಲ್ಲಿ ಎರಡು ವರ್ಷಗಳ ಕಲಿಕೆಯ ನಂತರ ಪ್ರೈವೇಟ್ ಆಗಿ ಅದೀಬ್ ಆಲಿಮಿನ ಪರೀಕ್ಷೆಯಲ್ಲಿ ತೇರ್ಗಡೆ ಪಡೆದರು. ಅವರ ವಿವಾಹವು ಅಲ್‌ಫಝ್ಲ್ ರಬ್ವದ ಅಸಿಸ್ಟೆಂಟ್ ಎಡಿಟರ್ ಆಗಿದ್ದ ಶೇಖ್ ಖುರ್‌ಶಿದ್ ಅಹ್ಮದ್ ಸಾಹಿಬ್‌ರೊಂದಿಗೆ ನಡೆದಿತ್ತು. ಅವರ ನಿಕಾಹನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಮಸ್ಜಿದ್ ಮುಬಾರಕ್‌ನಲ್ಲಿ ನಿರ್ವಹಿಸಿದ್ದರು. ಅಲ್ಲಾಹನು ಅವರಿಗೆ ಮೂವರು ಪುತ್ರರನ್ನು ಮತ್ತು ಈರ್ವರು ಪುತ್ರಿಯರನ್ನು ದಯಪಾಲಿಸಿರುವನು. ಅವರು ಲಂಡನಿನಲ್ಲಿ ಸೇವೆ ಸಲ್ಲಿಸುತ್ತಿರುವ ಮುಬಲ್ಲಿಗ್ ಅಬ್ದುಲ್‌ಬಾಸಿತ್ ಶಾಹಿದ್ ಸಾಹಿಬ್‌ರ ಸಹೋದರಿಯಾಗಿದ್ದರು. ಅಬ್ದುಲ್‌ಬಾಸಿತ್ ಸಾಹಿಬ್‌ರು ದೀರ್ಘಕಾಲ ಆಫ್ರಿಕದಲ್ಲೂ ಇದ್ದರು. ಅಮತುಲ್ಲತೀಫ್ ಸಾಹಿಬರ ಮೊಮ್ಮಗನಾದ ವಖಾಸ್ ಅಹ್ಮದ್ ಸಾಹಿಬ್ ಅಮೇರಿಕದಲ್ಲಿ ಮುರಬ್ಬಿಯಾಗಿರುವರು. ಅವರ ಒಬ್ಬಳು ಸಹೋದರಿಯಾದ ಅಮತುಲ್ ಬಾರಿ ನಾಸಿರ ಸಾಹಿಬ ಕೂಡ ಸೇವೆ ಸಲ್ಲಿಸುತ್ತಿರುವರು.

ಅಮತುಲ್ಲತೀಫ್ ಸಾಹಿಬ್ 13ನೇ ವಯಸ್ಸಿನಲ್ಲಿ ಲಜ್ನ ಇಮಾಇಲ್ಲದ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಲು ಶುರುಮಾಡಿದ್ದರು. ಅವರ ಸೇವೆಯೂ 70 ವರ್ಷಗಳ ಕಾಲ ಜಾರಿಯಲ್ಲಿತ್ತು. ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ನಿರ್ದೇಶನಗಳ ಪ್ರಕಾರ, ಹಝ್ರತ್ ಉಮ್ಮುಲ್ ಮೂಮಿನೀನ್ ಹಝ್ರತ್ ನುಸ್ರತ್ ಜಹಾನ್ ಬೇಗಂ ಸಾಹಿಬರ ಅಧೀನದಲ್ಲಿ ಹಾಗೂ ಅನೇಕ ಹಿರಿಯರ ಮೇಲ್ನೋಟದಲ್ಲಿ ಕೆಲಸಗಳನ್ನು ಮಾಡಲು ಸೌಭಾಗ್ಯ ಲಭಿಸಿತ್ತು. ಖಾದಿಯಾನಿನಲ್ಲಿ ಸೇವೆಗಳನ್ನು ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅನಂತರ ವಿಭಜನೆಯ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನ(ರ) ಮತ್ತು ಛೋಟಿ ಆಪರ ನಿರ್ದೇಶನ ಪ್ರಕಾರ ಮುಹಾಜಿರರ, ಎಂದರೆ ಭಾರತದಿಂದ ಪಾಕಿಸ್ತಾನಕ್ಕೆ ಹೋದವರ ಇಂಚಾರ್ಜ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅದೇ ರೀತಿಯಲ್ಲಿ ಅನೇಕ ನೆಲೆಗಳಲ್ಲಿ ಲಜ್ನ ಇಮಾಇಲ್ಲಾಹ್‌ದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು ಹಾಗೂ ದೀರ್ಘಕಾಲ ಇಶಾಅತ್ ಸೆಕ್ರಟರಿ ಸಹ ಆಗಿದ್ದರು. 1979ರಿಂದ 1986ರ ತನಕ ಮಿಸ್ಬಾಹ್ ಮಾಸಿಕದ ಸಂಪಾದಕರಾಗಿದ್ದರು. 1986ರಲ್ಲಿ ಅವರು ಕೆನಡದಲ್ಲಿ ನೆಲೆಸಿದ್ದರು. ಅಲ್ಲಿ ಲಜ್ನ ಇಮಾಇಲ್ಲದ ಗೌರವಾರ್ಥ ಸಲಹೆಗಾರತಿ ಆಗಿದ್ದರು. ಲಜ್ನ ಇಮಾಇಲ್ಲಾಹ್‌ದ ಅಲ್‌ಮಿಸ್‌ಬಾಹ್ ಮತ್ತು ಅಲ್‌ಅಝ್‌ಹಾರ್ ಆರಂಭಿಕ 4 ಸಂಪುಟಗಳನ್ನು ಸಂಕಲಿಸುವ ಕೆಲಸದಲ್ಲಿ ಪೂರ್ಣವಾದ ಸಹಕಾರ ಮಾಡಲು ಅವರಿಗೆ ಸೌಭಾಗ್ಯ ಲಭಿಸಿತ್ತು. ಛೋಟಿ ಆಪರ ಜೊತೆಗೆ 44 ವರ್ಷಗಳ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅವರ ಸೂಚನೆ ಮತ್ತು ಮೇಲ್ನೋಟದಲ್ಲಿ ನಾಸಿರಾತುಲ್ ಅಹ್ಮದಿಯಾದ ಮೊತ್ತಮೊದಲ ಇಜ್‌ತಿಮಾ ನಡೆಯಿತು. ಅಮತುಲ್ಲತೀಫ್ ಸಾಹಿಬ ನಾಸಿರಾತ್ ಸೆಕ್ರಟರಿ ಆಗಿದ್ದರು. ಅವರು ತನ್ನ ಪತಿಯಾದ ಶೇಖ್ ಖುರ್‌ಶೀದ್ ಸಾಹಿಬ್‌ರ ಜೊತೆ ಸೇರಿ ರಾಹೇ ಈಮಾನ್ ಮತ್ತು ಅಹ್ಮದಿಯಾ ಜಮಾಅತಿನ ಅನೇಕ ಚರಿತ್ರೆಗಳ ಸಂಕಲನ ಮಾಡಿದ್ದರು.

ಅವರ ಮಗನಾದ ಲಈಖ್ ಅಹ್ಮದ್ ಬಶೀರ್ ಸಾಹಿಬ್ ಬರೆಯುತ್ತಾರೆ: ತಾಯಿ ತನ್ನ ಮನೆಯಲ್ಲಿ ಎಲ್ಲ ಮಕ್ಕಳಿಗೂ ಆಳವಾದ ಪಾಠವೊಂದನ್ನು ಕಲಿಸಿರುವರು.

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 24 March 2022, Issue No. 12

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಅದೇನೆಂದರೆ, ಜಮಾಅತ್ ಮತ್ತು ಖಿಲಾಫತಿಗೆ ವಿರುದ್ಧವಾಗಿ ಏನಾದರೂ ಮಾತುಕತೆ ನಡೆದರೆ ಅದನ್ನು ಕಿಂಚಿತ್ತೂ ಆಲಿಸಬಾರದು. ಒಂದು ವೇಳೆ ಕಿವಿಗೆ ಅಂತಹ ಮಾತುಗಳು ತಲುಪಿದರೂ ಅದನ್ನು ನಾಲಗೆಗೆ ತರಬಾರದು, ಎಂದರೆ ಅದನ್ನು ಹೇಳುತ್ತಾ, ಹರಡುತ್ತಾ ಪುನರಾರ್ತಿಸುತ್ತಾ ಇರಬೇಡಿರಿ. ಏಕೆಂದರೆ ಅಲ್ಲಾಹನ ವಿಶೇಷ ಸಹಾಯಗಳು ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಇದೆ. ಪ್ರತಿಯೊಂದು ಪರೀಕ್ಷಣೆ ಘಟ್ಟ ಮತ್ತು ಫಿತ್ನದ ನಂತರ ಅತ್ಯುನ್ನತನಾದ ಅಲ್ಲಾಹನ ದೃಷ್ಟಾಂತಗಳು ಮತ್ತು ಸಹಾಯಗಳು ಜಮಾಅತಿನ ಪರವಾಗಿ ಪ್ರಕಟವಾಗುತ್ತವೆ. ಆದ್ದರಿಂದ ನೀವು ಅನಾವಶ್ಯಕವಾಗಿ ಇಂತಹ ಪಿತೂರಿಗಳಲ್ಲಿ ಭಾಗಿಯಾಗಬೇಡಿರಿ. ಲಈಖ್ ಸಾಹಿಬ್‌ರು ಬರೆಯುತ್ತಾರೆ: ಅವರು ಜಮಾಅತಿನ ಚಲಿಸುವ ಒಂದು ಚರಿತ್ರೆ ಗ್ರಂಥವಾಗಿದ್ದರು. ಬಹಳ ಸ್ನೇಹಮಯಿ ಮತ್ತು ಎಲ್ಲರ ಒಳಿತನ್ನು ಬಯಸುವ ಮತ್ತು ಅಲ್ಲಾಹನ ಮೇಲೆ ಭರವಸೆ ಇರಿಸುವವರಾಗಿದ್ದರು. ಮನುಕುಲದ ಸೇವೆಯ ಬಹಳ ಅಭಿರುಚಿಯನ್ನು ಹೊಂದಿದ್ದರು. ಕೆನಡಕ್ಕೆ ವಲಸೆ ಬರುವ ಮುಹಾಜಿರ್‌ರಾದ ಕುಟುಂಬಗಳ ವಸತಿಯ ಏರ್ಪಾಡು ಮಾಡಲು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದರು.

ಅವರ ಒಬ್ಬ ಮಗನು ಬರೆಯುತ್ತಾನೆ: ನಮ್ಮ ತಾಯಿಗೆ ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿ ಇತ್ತು. ಖಲೀಫತುಲ್ ಮಸೀಹ್‌ರಿಗಾಗಿ ದುಆ ಮಾಡಲು ಸದಾ ನೆನಪಿಸುತ್ತಿದ್ದರು. ನಮಾಝ್‌ನ್ನು ಸರಿಯಾಗಿ ಪಾಲಿಸುತ್ತಿದ್ದರು ಮತ್ತು ಕಟ್ಟುನಿಟ್ಟಾಗಿ ಅದನ್ನು ನಿರ್ವಹಿಸುತ್ತಿದ್ದರು. ಜುಮಾ ದಿವಸ ಒಂದು ಹಬ್ಬದಂತೆ ಇರುತ್ತಿತ್ತು. ಅನೇಕ ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಸರಿಯಾದ ಉಚ್ಛಾರಣೆಯೊಂದಿಗೆ ಪಾರಾಯಣ ಮಾಡಲು ತಾಕೀತು ಮಾಡುತ್ತಿದ್ದರು.

ಅವರ ಮೊಮ್ಮಗನಾದ ವಖಾಸ್ ಖುರ್‌ಶಿದ್ ಸಾಹಿಬ್ ಹೇಳುತ್ತಾರೆ: ಸದಾ ದುಆ ಮತ್ತು ಕಲಿಕೆಯ ಕಡೆಗೆ ಗಮನಹರಿಸುತ್ತಿದ್ದರು. ಮಕ್ಕಳ ಉತ್ತಮ ರೀತಿಯಲ್ಲಿ ತರಬೇತಿ ನಡೆಯಲಿಕ್ಕಾಗಿ ಕಥೆಗಳ ಮೂಲಕ ಮಕ್ಕಳಿಗೆ ಜಮಾಅತಿನ ಚರಿತ್ರೆಯ ಪರಿಚಯ ಮಾಡಿಕೊಡುತ್ತಿದ್ದರು.

ಅವರ ಮೊಮ್ಮಗಳು ಹೇಳುತ್ತಾಳೆ: ನನ್ನ ಅಜ್ಜಿಗೆ ಒಂಬತ್ತು ಮೊಮ್ಮಕ್ಕಳು ಇವೆ. ಅವರು ಲಜ್ನ ಇಮಾಇಲ್ಲಾಹ್ ಸೇವಕಿಗಳಾಗಲು ತರಬೇತಿ ಮಾಡಿದರು. ಅಷ್ಟು ಮಾತ್ರವಲ್ಲ, ಸರಿಯಾದ ಶಿಷ್ಟಾಚಾರಗಳು, ಸರಿಯಾದ ಪರ್ದಾಧಾರಣೆ, ಮನೆಯ ನಿರ್ವಹಣೆ ಮತ್ತು ಮೇಲ್ನೋಟ, ಅತಿಥಿ ಸತ್ಕಾರ, ಹೊಲಿಗೆ, ಉರ್ದು ಓದುಬರಹ ಈ ಎಲ್ಲ ಸಂಗತಿಗಳಲ್ಲಿ ನಮಗೆ ಸದಾ ಮಾರ್ಗದರ್ಶನ ನೀಡುತ್ತಿದ್ದರು. ನಾವು ದೊಡ್ಡವರಾಗುತ್ತಿದ್ದಂತೆ, ನಮ್ಮ ಪತಿ ಮತ್ತು ಅತ್ತಿಗೆ ಮನೆಯವರ ಉತ್ತಮ ಕಾಳಜಿ ವಹಿಸಲು ಹುರಿದುಂಬಿಸುತ್ತಿದ್ದರು. ನಮ್ಮ ಅತ್ತಿಗೆ ಮನೆಯಲ್ಲಿ ನಮ್ಮ ಸಮಯವನ್ನು ಸಾಗಿಸಿದರ ಬಗ್ಗೆ ಅವರೊಡನೆ ಹೇಳಿಕೊಡುವಾಗ ಅವರು ಬಹಳ ಸಂತೋಷಗೊಳ್ಳುತ್ತಿದ್ದರು. ಈ ಕರ್ತವ್ಯಗಳೊಂದಿಗೆ ಉತ್ತಮ ರೀತಿಯಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪಡೆಯಲು ಮತ್ತು ಕೇರಿಯರ್ ಮಾಡಿಕೊಳ್ಳಲು ಅವರು ನಮ್ಮನ್ನು ಹುರಿದುಂಬಿಸುತ್ತಿದ್ದರು. ಬರ್ತ್‌ಡೇ ಆಚರಿಸುವುದು ಮುಂತಾದ ಇಸ್ಲಾಮೇತರ ಅನಾಚಾರಗಳನ್ನು ಮಾಡದೇ ಇರುವುದರ ವಿಷಯದಲ್ಲಿ ದೃಢವಾಗಿ ನೆಲೆಗೊಂಡಿದ್ದರು. ಆದರೆ ಜನ್ಮದಿನ ಮತ್ತು ಇನ್ನಿತರ ವಿಶೇಷ ಸಂದರ್ಭಗಳನ್ನು ನೆನಪಿನಲ್ಲಿ ಇರುವಂತೆಯೂ ಮಾಡುತ್ತಿದ್ದರು. ಅದು ಹೇಗೆಂದರೆ, ಯಾವಾಗಲೂ ಅಲ್ಲಾಹನ ಸ್ತುತಿಗಾನ ಮಾಡಲು ಮತ್ತು ಜಮಾಅತಾಗಿ ಒಂದು ಕುಟುಂಬದ ಹಾಗೆ ಎಲ್ಲರೂ ಒಟ್ಟಿಗೆ ದುಆಗಳನ್ನು ಮಾಡಲು ಹೇಳುತ್ತಿದ್ದರು. ಕೆನಡದಲ್ಲಿ ಅಹ್ಮದೀ ಮುಸ್ಲಿಮರು ಎಂಬ ನೆಲೆಯಲ್ಲಿ ಅವರು ನಮ್ಮ ಪರಿಪಾಲನೆ ಮತ್ತು ತರಬೇತಿಯ ಅವಿಭಾಜ್ಯ ಅಂಗವಾಗಿದ್ದರು. ನಾವು ನಮ್ಮ ವಿಶ್ವಾಸವನ್ನು ಪಾಶ್ಚಿಮಾತ್ಯ ಸಮಾಜದಲ್ಲಿ ಇದ್ದುಕೊಂಡು ಹೇಗೆ ಕಾಪಾಡುವುದು ಎಂಬುದನ್ನು ಅವರು ನಮಗೆ ಕಲಿಸಿಕೊಟ್ಟಿದ್ದರು.

ಆದ್ದರಿಂದ ಇವುಗಳಾಗಿವೆ ತಾಯಂದಿರ ಮತ್ತು ಹಿರಿಯರ ಕರ್ತವ್ಯ. ಈ ರೀತಿಯಾಗಿ ಹೊಸ ತಲಮಾರಿನವರನ್ನು ಕಾಪಾಡಿಕೊಳ್ಳಬೇಕು.

ಎಂದರೆ ಅವರಿಗೆ ದೀನನ್ನೂ ಕಲಿಸಬೇಕು ಮತ್ತು ಈ ಪಾಶ್ಚಿಮಾತ್ಯ ಸಮಾಜದಲ್ಲಿ ಯಾವುದೇ ಕೀಳರಿಮೆಯ ಮನೋಭಾವವಿಲ್ಲದೇ ಹೇಗೆ ತಮ್ಮನ್ನು ತಾವೇ ಅಳವಡಿಸಿಕೊಳ್ಳಬೇಕು ಎಂಬುದರ ಕಡೆಗೆ ಅವರ ಗಮನಸೆಳೆಯಬೇಕು.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಸಂತಾನ ಪರಂಪರೆಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಆಮೀನ್.

************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 06ರ ಉಳಿದ ಭಾಗ)*

ನಾವು ಹಝ್ರತ್ ಪೈಗಂಬರರ(ಸ) ಸಂರಕ್ಷಣೆಗಾಗಿ ಸತ್ಯನಿಷೇಧಿಗಳೊಡನೆ ಯುದ್ಧ ಮಾಡುವೆವು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕ್ರ್ ಬಹಳ ಸೌಮ್ಯ ಸ್ವಭಾವದವರಾಗಿರುವರು. ಆದರೆ ಸತ್ಯ ಮತ್ತು ಸರಿಯಾದ ಮಾತುಗಳು ಹೆಚ್ಚಾಗಿ ಉಮರರ ನಾಲಗೆಯಿಂದಲೇ ಹೊರಡುತ್ತವೆ. ಆದ್ದರಿಂದ ಯುದ್ಧಕ್ಕಾಗಿ ತಯಾರಿ ಮಾಡಿರಿ. ಅನಂತರ ಆಸುಪಾಸಿನ ಗೋತ್ರಗಳಿಗೆ ಹೀಗೆ ತಿಳಿಸಲಾಯಿತು: ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ನಂಬುವ ಪ್ರತಿಯೊಬ್ಬ ವ್ಯಕ್ತಿ ರಮಝಾನಿನ ಆರಂಭದ ದಿನಗಳಲ್ಲಿ ಮದೀನಕ್ಕೆ ಬಂದು ಸೇರಬೇಕು. ಹೀಗೆ ಸೈನ್ಯ ಒಟ್ಟುಗೂಡಲು ಶುರುವಾಯಿತು. ಅನೇಕ ಸಾವಿರಗಳ ಸೈನ್ಯ ತಯಾರಾಯಿತು. ಹೀಗೆ ಹಝ್ರತ್ ಪೈಗಂಬರ್(ಸ) ಯುದ್ಧಕ್ಕಾಗಿ ಹೊರಟರು. ಹಝ್ರತ್ ಪೈಗಂಬರ್(ಸ) ಹೊರಟಾಗ ಅವರು ಹೀಗೆ ದುಆ ಮಾಡಿದರು: ಹೇ ನನ್ನ ಅಲ್ಲಾಹ್, ನಾನು ನಿನ್ನೊಡನೆ ಹೀಗೆ ಪ್ರಾರ್ಥಿಸುತ್ತೇನೆ: ನೀನು ಮಕ್ಕಾ ನಿವಾಸಿಗಳ ಕಿವಿಗಳನ್ನು ಕಿವುಡುಗೊಳಿಸು. ಅವರ ಗೂಢಚರರನ್ನು ಕುರುಡುಗೊಳಿಸು. ಅವರು ನಮ್ಮನ್ನು ಕಾಣದಿರಲಿ ಮತ್ತು ಅವರ ಕಿವಿಗಳಿಗೆ ನಮ್ಮ ಯಾವುದೇ ಸುದ್ದಿ ತಲುಪದಿರಲಿ. ಹೀಗೆ ಹಝ್ರತ್ ಪೈಗಂಬರ್(ಸ) ಹೊರಟರು. ಮದೀನದಲ್ಲಿ ನೂರಾರು ಕಪಟವಿಶ್ವಾಸಿಗಳು ಇದ್ದರು. ಆದರೆ ಹತ್ತು ಸಾವಿರ ಸೈನಿಕರನ್ನು ಒಳಗೊಂಡ ಸೈನ್ಯ ಮದೀನದಿಂದ ಹೊರಟಾಗ, ಅದರ ಯಾವುದೇ ಮಾಹಿತಿ ಮಕ್ಕದಲ್ಲಿ ತಲುಪಲಿಲ್ಲ. (ಸೈರೆ ರೂಹಾನಿ(7), ಅನ್ವಾರುಲ್ ಉಲೂಮ್, ಸಂಪುಟ–24, ಪುಟ–260–262) ಇದು ಅಲ್ಲಾಹನ ಕೆಲಸವಾಗಿತ್ತು.

ತಬ್‌ಖಾತ್ ಇಬ್ನು ಸಅದಿನಲ್ಲಿ ಹೀಗೆ ಹೇಳಲಾಗಿದೆ: ಮುಸ್ಲಿಮರ ತಂಡ ಇಶಾದ ಸಮಯದಲ್ಲಿ ಮರುಝ್ಝುಹರಾನಿಗೆ ತಲುಪಿತು. ಮರುಝ್ಝುಹರಾನ್ ಎಂಬ ಪ್ರದೇಶ ಮಕ್ಕದಿಂದ ಮದೀನದ ಮಾರ್ಗದಲ್ಲಿ 25 ಕಿ.ಮಿ. ದೂರದಲ್ಲಿ ಇದೆ. ಎಂದರೆ ಮಕ್ಕದಿಂದ 25 ಕಿ.ಮಿ. ದೂರದಲ್ಲಿತ್ತು. ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಆದೇಶಿಸಿದಾಗ ಅವರು 10 ಸಾವಿರ ಜಾಗಗಳಲ್ಲಿ ಬೆಂಕಿ ಹೊತ್ತಿಸಿದರು. ಖುರೈಶಿಗಳಿಗೆ ಹಝ್ರತ್ ಪೈಗಂಬರ್(ಸ) ರವಾನೆಯಾಗುವ ಸುದ್ದಿ ತಲುಪಿರಲಿಲ್ಲ. ಹಝ್ರತ್ ಪೈಗಂಬರ್(ಸ) ಅವರೊಡನೆ ಯುದ್ಧ ಮಾಡುವರು ಎಂಬ ಭಯದಿಂದ ಖುರೈಶಿಗಳು ದುಃಖಿತರಾಗಿದ್ದರು. ಅವರಿಗೆ ಸುದ್ದಿ ತಲುಪಿರಲಿಲ್ಲ. ಆದರೆ ಖಂಡಿತ ಯುದ್ಧ ಮಾಡುವರು ಎಂದು ಖುರೈಶಿಗಳು ಭಾವಿಸಿದ್ದರು. ಅವರಿಗೆ ಇದರ ದುಃಖವಿತ್ತು. ಹೇಗಿದ್ದರೂ ಮುಸ್ಲಿಮರ ತಂಡ ಅಲ್ಲಿ ತಂಗಿ 10 ಸಾವಿರ ಸ್ಥಳಗಳಲ್ಲಿ ಬೆಂಕಿಯನ್ನು ಹೊತ್ತಿಸಿದಾಗ ಸ್ಥಿತಿಗತಿಗಳನ್ನು ತಿಳಿದುಬರಲು ಖುರೈಶಿಗಳು ಅಬೂಸುಫ್‌ಯಾನನ್ನು ಕಳುಹಿಸಿದರು. ಖುರೈಶಿಗಳು ಅಬೂಸುಫ್‌ಯಾನ್‌ನೊಡನೆ ಹೇಳಿದರು: ನೀನು ಮುಹಮ್ಮದನ್ನು ಕಂಡರೆ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರಿಂದ ಅಭಯ ಯಾಚಿಸು. ಅಬೂಸುಫ್‌ಯಾನ್ ಬಿನ್ ಹರಬ್, ಹಕೀಂ ಬಿನ್ ಹಝ್ಝಾಮ್ ಮತ್ತು ಬುದೈಲ್ ಬಿನ್ ವರಖ ಹೊರಟರು. ಅವರು ಸೈನ್ಯವನ್ನು ಕಂಡಾಗ ತೀವ್ರವಾಗಿ ಗಾಬರಿಗೊಂಡರು. ಆ ರಾತ್ರಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್‌ರನ್ನು(ರ) ಕಾವಲಿನ ಮೇಲ್ನೋಟಕ್ಕಾಗಿ ನಿಶ್ಚಯಿಸಿದ್ದರು. ಅಬುಸುಫ್‌ಯಾನಿನ ಶಬ್ದವನ್ನು ಹಝ್ರತ್ ಅಬ್ಬಾಸ್ ಕೇಳಿದಾಗ ಅವರು ಉಚ್ಚ ಸ್ವರದಲ್ಲಿ ಹೀಗೆ ಕರೆದು ಹೇಳಿದರು: ಎಲ್ಯೆ ಅಬೂ ಹಂಝ್ಲ, (ಇದು ಅಬುಸುಫ್‌ಯಾನಿನ ಉಪನಾಮವಾಗಿತ್ತು) ನಿನ್ನ ಹಿಂದೆ ಏನಿದೆ? ಅಬುಸುಫ್‌ಯಾನ್ ಹೇಳಿದನು: ಹತ್ತು ಸಾವಿರ ಜನರೊಂದಿಗೆ ಹಝ್ರತ್ ಪೈಗಂಬರ್(ಸ) ಇರುವರು. ಹಝ್ರತ್ ಅಬ್ಬಾಸ್(ರ) ಅವನಿಗೆ ಅಭಯ ನೀಡಿದರು ಮತ್ತು ಅವನ ಇಬ್ಬರು ಸಂಗಡಿಗರನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಕರೆದುಕೊಂಡು ಹೋದರು. ಮೂವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–102–103, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) (ಅಟ್ಲಸ್ ಸೀರತ್ ನಬವಿ(ಸ), ಪುಟ–396, ದಾರುಸ್ಸಲಾಮ್)

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*************

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.